
B. A. Bellicappa

# ಕೊಡಗು ಸಂಗಾತಿ

ಸಂಪಾದಕಿ : ಪಟ್ಟಡ ಶೀಲಾಮಣಿ

ಕನ್ನಡ ಮತ್ತು ಗೌಡ ಕನ್ನಡದ ಏಕೈಕ ಪಾಕ್ಷಿಕ ಪತ್ರಿಕೆ

K.R.N.N. 240 ಸಂಪುಟ : 2 ಸಂಚಿಕೆ : 10 ಮೇ 16 ರಿಂದ 31–1998 ಪುಟಗಳು : 24 ರೂ. 5



ಭಾಗಮಂಡಲದಲ್ಲಿ ನಡೆದ ಗೌಡ ಸಾಂ[illegible]ತಿಕ ಸಮ್ಮೇಳನದ [illegible]: ಎನ್.ಎಸ್. ದೇ[illegible] ರವರಿಂದ



ಸಂಪ್ರದಾಯ ಉಡುಪಿನಲ್ಲಿ ಗೌಡ ಮಹನೀಯರು



ಸಂಪ್ರದಾಯ ಉಡುಪಿನಲ್ಲಿ ಪೂರ್ಣಕುಂಭ ಹಿಡಿದ ಗೌಡ ನೀರೆಯರು

# ವಿನಂತಿ

ಕೊಡಗು ಸಂಗಾತಿ ಪತ್ರಿಕೆಯ ಓದುಗರು ತಮ್ಮ ಸದಸ್ಯತನವನ್ನು ಸಾಧ್ಯವಾದಷ್ಟು ಶೀಘ್ರವಾಗಿ ನವೀಕರಿಸಿ ಪತ್ರಿಕೆ ಬೆಳೆಯಲು ಸಹಕರಿಸಬೇಕಾಗಿ ಕೋರಿಕೆ. ಸದಸ್ಯತನವನ್ನು ಕೊಡದಿದ್ದವರಿಗೆ ಈ ಮೊದಲು ಜ್ಞಾಪನಾ ಪತ್ರವನ್ನು ಕಳುಹಿಸಲಾಗಿದೆ.

– ಸಂಪಾದಕಿ

---

## ಜೀವಾವಧಿ ಸದಸ್ಯತನ ಕೊಟ್ಟೊಳೊ

ಶ್ರೀ ಎಸ್. ಎಸ್. ದೇವಿಪ್ರಸಾದ್, ಸಂಪಾಜೆ ಮತ್ತೆ ಶ್ರೀ ಕೆ. ದಾಮೋದರ, ನಿವೃತ್ತ ಪ್ರಾಂಶುಪಾಲರು ಸಂಪಾಜೆ, ಇವು ಪತ್ರಿಕೆ ಬೆಳೆಯೋ ದೃಷ್ಟಿಂದ ಜೀವಾವಧಿ ಸದಸ್ಯತನದ ರೂ. 1000/- ಕೊಟ್ಟ್ ಸಹಕರಿಸಿಯೊಳೊ. ಇವ್ಕೆ ನಮ್ಮ ಸಂಗಾತಿ ವತಿಂದ ವಂದನೆಗ

– ಸಂಪಾದಕಿ

---

ನಮ್ಮ ಅರೆಭಾಷಿಕರ ಭಾಷೆ ಮತ್ತು ಸಂಸ್ಕೃತಿಗಳ ಆಚಾರ-ವಿಚಾರ, ಕಟ್ಟು-ಕಟ್ಟಳೆಗಳ ಉಳಿವಿಗಾಗಿ ಮತ್ತು ಏಳ್ಗೆಗಾಗಿ ಶ್ರಮಿಸುತ್ತಿರುವ ಹಾಗೂ ಕೊಡಗು ಸಂಗಾತಿ ತನ್ನ ಪ್ರಥಮ ವಾರ್ಷಿಕೋತ್ಸವವನ್ನು ಆಚರಿಸಿದ ಈ ಸಂದರ್ಭದಲ್ಲಿ ಶುಭ ಕೋರುವ

**ಶ್ರೀ ಅಮೆ ಮನೆ ಗಣೇಶ** (ವೆಂಕಟೇಶ್ವರ ಟ್ರಾನ್ಸ್‌ಪೋರ್ಟ್)

**ಶ್ರೀಮತಿ ಸರೋಜಿನಿ ಗಣೇಶ**

ಮತ್ತು ಮಕ್ಕಳಾದ

**ಅನಂತ, ಜಯಂತ, ಸೋಮಣ್ಣ**

ಹೊಸ ಬಡಾವಣೆ, ಕೆ.ಇ.ಬಿ. ಹತ್ತಿರ, ಸುಂಠಿಕೊಪ್ಪ, ಕೊಡಗು ಜಿಲ್ಲೆ.

ದೂರವಾಣಿ [08276] 62450

○ ○ ○ ○ ○

ಹಳೇ ತಲೆ ಮಾರಿಗೂ, ಹೊಸ ತಲೆ ಮಾರಿಗೂ ಬೆಸುಗೆಯಂಗೆ ಲಾಯ್ಕಾಗಿ ಪೊರ್ಲಾಗಿ ಬರ್ತಾ ಉಟ್ಟು. ಮತ್ತೆ, ಸಂಗ್ರಹಕ್ಕೆ ಯೋಗ್ಯವಾದ ಪುಸ್ತಕ ಸನ ಹೌದು. ಗೌಡರಾದ ನಾವೆಲ್ಲವು ಒಲೆಗೂಂದರಂಗೆ ತಕ್ಕಂಡ್ ಓದಕು, ಪತ್ರಿಕೆನ ಬೆಳ್ಸೊಕು.

# ಕೊಡಗು ಸಂಗಾತಿ

ಸಂಪಾದಕಿ, ಪ್ರಕಾಶಕಿ :
**ಪಟ್ಟಡ ಪಿ. ಶೀಲಾಮಣಿ**
ಗೌರವ ಸಂಪಾದಕ :
**ಪಟ್ಟಡ ಎಂ. ಪ್ರಭಾಕರ**

ಮುದ್ರಕರು :
**ಮಣ್ಣಂಡ್ರ ಕೆ. ತಮ್ಮಯ್ಯ**
**ಆಶೀರ್ವಾದ್ ಪ್ರಿಂಟರ್ಸ್,**
180/ಎ, 6ನೇ ಮುಖ್ಯ ರಸ್ತೆ,
ವಿನಾಯಕನಗರ, ಮೈಸೂರು-12

ಚಂದಾ ಕಳುಹಿಸುವ ಮತ್ತು
ಜಾಹೀರಾತು ಪ್ರಸಾರ ಕಛೇರಿ :

**ಕೊಡಗು ಸಂಗಾತಿ**
ನಂ. 35, **"ಸವಿತಾ ನಿಲಯ"**
1ನೇ ಕ್ರಾಸ್, 4ನೇ ಬ್ಲಾಕ್,
ಡಿವಿಜನಲ್ ಟೆಲಿಕಾಂ ಕಛೇರಿ ಹತ್ತಿರ,
ಜಯಲಕ್ಷ್ಮಿಪುರಂ, **ಮೈಸೂರು-12.**
ಫೋನ್ : **516771**

**ಮಡಿಕೇರಿಯ ನಮ್ಮ ವಿಳಾಸ**

**ಕೊಡಗು ಸಂಗಾತಿ**
C/o ನಂಗಾರ್ ಆಡಿಯೋ ವೀಡಿಯೊ
ಹೊಳ್ಳ ಕಾಂಪ್ಲೆಕ್ಸ್, ಮಂಗಳೂರು ರಸ್ತೆ,
ಚಿಕ್ಕಪೇಟೆ, ಮಡಿಕೇರಿ-571 201


## ಒಳನೋಟ

ಪುಟಗಳು



## ಅರೆ ಭಾಷಿಕ ವಿಭಾಗ




**ಚಂದಾ ವಿವರ**

| | | |
|---|---|---|
| ಬಿಡಿ ಪ್ರತಿ | : | 5 ರೂ. |
| ಅರ್ಧ ವಾರ್ಷಿಕ | : | 60 ರೂ. |
| ವಾರ್ಷಿಕ ಚಂದಾ | : | 120 ರೂ. |

## ಸಂಪಾದಕೀಯ :

### ಹಿರಿಯರ ಸ್ಮರಣೆ

ಗೌಡರಲ್ಲಿ ಪ್ರತಿಯೊಂದು ಕಾರ್ಯ ನಡೆಸುವಾಗ ಗುರು-ಹಿರಿಯರನ್ನು ನೆನೆದು ಕಾರ್ಯಪ್ರಾರಂಭ ಮಾಡುತ್ತಾರೆ. ಅದಕ್ಕೆ ಕಾರಣ ನಮ್ಮ ಹಿರಿಯರು ನಮ್ಮ ಅಭ್ಯುದಯಕ್ಕೆ ಪಟ್ಟ ಶ್ರಮಕ್ಕಾಗಿ. ಅದೇ ರೀತಿ ಒಂದು ಮತದ ಮತ ಸ್ಥಾಪಕರು ಅಥವಾ ಮಹಾನ್ ವ್ಯಕ್ತಿಯ ಜನ್ಮ ದಿನಾಚರಣೆಯನ್ನು ಮಾಡುತ್ತಾರೆ. ಉದಾಹರಣೆಗೆ ಹಿಂದುಗಳು ಗೋಕುಲಾಷ್ಟಮಿ, ರಾಮಜನ್ಮಾಷ್ಟಮಿ, ಬುದ್ಧ ಜಯಂತಿ, ಮಹಾವೀರ ಜಯಂತಿ, ಬಸವಜಯಂತಿ ಮುಂತಾದವು. ಅದೇ ರೀತಿ ರಾಷ್ಟ್ರೀಯ ನಾಯಕರ ಜನ್ಮ ದಿನವನ್ನು ಮಹಾತ್ಮಗಾಂಧಿ ಜಯಂತಿ, ನೆಹರು ಜಯಂತಿ ಅಂಬೇಡ್ಕರ್ ಜಯಂತಿಯನ್ನಾಗಿ ಆಚರಿಸುತ್ತಾರೆ. ಹೀಗೆ ಆಚರಿಸುವುದರಿಂದ ಆ ಮಹಾಪುರುಷರು ಆಯಾಯ ಕ್ಷೇತ್ರಗಳಲ್ಲಿ ಮಾಡಿದ ಕಾರ್ಯಗಳು, ಅವರ ತ್ಯಾಗವನ್ನು ನೆನಸಿಕೊಂಡು ಅವರ ತತ್ವಗಳ ಅನುಷ್ಠಾನಗಳಿಗೆ ತಕ್ಕ ಸಂದರ್ಭ ಒದಗಿಸುವಂತಾಗುತ್ತದೆ. ಅದೇ ರೀತಿ ಗೌಡ ಸಮಾಜದವರಲ್ಲಿ ಅನೇಕ ಗಣ್ಯರು ಅನೇಕ ಕಾರ್ಯಗಳನ್ನು ಸಮಾಜದ ಉದ್ಧಾರಕ್ಕಾಗಿ ಮಾಡಿದ್ದಾರೆ. ಅವರಲ್ಲೂ ಗೌಡರಲ್ಲಿ ಪ್ರಪ್ರಥಮ ಪದವೀಧರ, ಪ್ರಥಮ ವಕೀಲರೂ ಹಾಗೂ ನ್ಯಾಯಾಧೀಶರೂ ಆಗಿ ತನ್ನ ಜನಾಂಗವನ್ನು ಬಲಾಢ್ಯ ಜನರು ತುಳಿಯುವುದನ್ನು ಪ್ರತಿಭಟಿಸಿ ಜನಾಂಗದವರ ಆತ್ಮ ಗೌರವವನ್ನು ಕಾಪಾಡಲು ಹಾಗೂ ಬ್ರಿಟಿಷ್ ಸರ್ಕಾರಕ್ಕೆ ಕೊಡಗಿನಲ್ಲಿ ಗೌಡರ ಇರುವಿಕೆಯನ್ನು ತೋರಿಸಿ ಕೊಡುವುದಕ್ಕೆ ಸಮಾಜದ ಮುಖಂಡರನ್ನು ಒಗ್ಗೂಡಿಸಿ ವಿದ್ಯಾಹೀನರಾಗಿದ್ದ ಸಮಾಜದ ಜನರನ್ನು ಮೇಲಕ್ಕೆತ್ತಲು ವಿದ್ಯಾ ಪ್ರಸಾರವೇ ಮೂಲಮಂತ್ರವೆಂದು ಗ್ರಹಿಸಿ ಕೊಡಗು ಗೌಡ ವಿದ್ಯಾಸಂಘ ಹಾಗೂ ಮಡಿಕೇರಿ ಗೌಡ ವಿದ್ಯಾರ್ಥಿ ಭವನದ ಏಳಿಗೆಗಾಗಿ ಅವಿರತ ದುಡಿದ ಗೌಡಕೇಸರಿ ದಿ|| ನಿಡ್ಯಮಲೆ ಮುದ್ದಪ್ಪನವರಿಗೆ ಅವರ ನೆನಪಿಗಾಗಿ ಒಂದು ಸ್ಮಾರಕ ಸ್ಥಾಪಿಸುವುದು ಕೊಡಗಿನ ಎಲ್ಲಾ ಗೌಡರ ಕೃತಜ್ಞತೆಯಲ್ಲವೇ?

ಇದನ್ನು ಈಗಿನ ಗೌಡ ಯುವಕ ಯುವತಿಯರಿಗೆ ತಿಳಿಗೊಡುವ ಅಭಿಲಾಷೆಯಿಂದಲೇ ಬೆಂಗಳೂರಿನ ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜ ದಿವಂಗತ ನಿಡ್ಯಮಲೆ ಮುದ್ದಪ್ಪನವರ ಜನ್ಮ ಶತಾಬ್ಧಿಯನ್ನು ಆಚರಿಸಿ ಅವರ ಬಗ್ಗೆ ಒಂದು ನನನೆಪಿನ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು.

ಈ ಸಮಾರಂಭಕ್ಕೆ ದಿ|| ಪಾಂಡನ ಸುಬ್ಬಯ್ಯನವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತಾಡುತ್ತಾ, ಈ ವಿಷಯ ಈ ಸಮಾರಂಭವನ್ನು ನಾವು ಕೊಡಗಿನಲ್ಲಿ ಮಾಡಬೇಕಿತ್ತು. ಆದರೆ ನೀವು ಇಲ್ಲಿ ಬೆಂಗಳೂರಿನಲ್ಲಿ ಆಚರಿಸುತ್ತಿರುವುದು ಸಂತೋಷದ ವಿಷಯ. ನಾನು ಮಡಿಕೇರಿಗೆ ಹೋದ ನಂತರ ಅಲ್ಲಿನ ಯುವಕರಿಗೆ ತಿಳಿಸಿ ಅಲ್ಲಿಯೂ ಸಹ ಆಚರಿಸುವಂತೆ ಹೇಳುತ್ತೇನೆಂದು ಹೇಳಿದರು. ಆದರೆ ದುರಾದೃಷ್ಟವಶಾತ್ ಶ್ರೀ ಸುಬ್ಬಯ್ಯನವರು ತೀರಿಕೊಂಡರು. ಅವರು ಬದುಕಿದ್ದಿದ್ದರೆ ಖಂಡಿತಾ ಮಡಿಕೇರಿಯಲ್ಲಿಯೂ ದಿ|| ಮುದ್ದಪ್ಪನವರ ಜನ್ಮಶತಾಬ್ಧಿ ಆಚರಿಸುವ ಏರ್ಪಾಡು ಖಂಡಿತಾ ಆಗುತ್ತಿತ್ತುಎಂದು ನನ್ನ ನಂಬಿಕೆ. ಇದಲ್ಲದೆ ಆ ಸಭೆಯಲ್ಲಿ ಶ್ರೀ ಮುದ್ದಪ್ಪನವರ ಪ್ರತಿಮೆಯನ್ನು ಗೌಡ ವಿದ್ಯಾರ್ಥಿಭವನದ ಮುಂದುಗಡೆ ನಿಲ್ಲಿಸಬೇಕೆಂಬ ಅಭಿಪ್ರಾಯವನ್ನುಸಭೆಯಲ್ಲಿ ಪ್ರಸ್ತಾಪಿಸಲಾಗಿತ್ತು

ಶ್ರೀ ದಿವಂಗತ ಮುದ್ದಪ್ಪನವರ ಸ್ಮರಣೆಗಾಗಿ ಅವರ ವಿಷಯವನ್ನುಈಗಿನ ಯುವಕ ಯುವತಿಯರಿಗೆ ತಿಳಿಯುವಂತೆ ಮಾಡುವುದೇ ಅಲ್ಲದೆ ಅವರು ಮಾಡಿದ ಮಹತ್ಕಾರ್ಯಕ್ಕೆ ಅವರ ಪ್ರತಿಮೆಯೊಂದನ್ನು ಕೆತ್ತಿಸಿ ಸ್ಥಾಪಿಸಿದರೆ ಶ್ರೀ ಮುದ್ದಪ್ಪ ತನ್ನ ಜನರ ಮೇಲ್ಮೆಗಾಗಿ ದುಡಿದ ತ್ಯಾಗಕ್ಕೆ ಗೌರವ ಸೂಚಿಸಿದಂತಾಗುತ್ತದೆಂದು ನನ್ನ ಅಭಿಪ್ರಾಯ.

ಯುವಕ ಮತ್ತು ಯುವತಿಯರು 65-70 ವರ್ಷ ವಯಸ್ಸಿನ ತಮ್ಮ ಹಿರಿಯರಿಂದ ಕೇಳಿಯೂ ಹಾಗೂ ಅವರ ಬಗ್ಗೆ ಪ್ರಕಟಿಸಿದ ಲೇಖನಗಳನ್ನು ಓದಿದರೆ ಅವರ ಶ್ರಮ, ಎಷ್ಟರಮಟ್ಟಿಗೆ ತನ್ನ ಸಮಾಜದ ಮೇಲ್ಮೆಗಾಗಿ ದುಡಿದಿದ್ದಾರೆಂಬುದು ಅರಿವಾಗುವುದು. ಶ್ರೀ ಮುದ್ದಪ್ಪನವರು ಮಾಡಿದ ತ್ಯಾಗ ಹಾಗೂ ಕೆಲಸಕ್ಕೆ ಗೌಡ ಸಮಾಜ ನಾನು ಮೇಲೆ ಹೇಳಿದ ಕೆಲಸವನ್ನು ಮಾಡಿದರೆ ಅದು ಜನಾಂಗ ಅವರಿಗೆ ಸಲ್ಲಿಸುವ ಕೃತಜ್ಞತೆ ಎಂದು ನಾನು ಭಾವಿಸಿ ಕೊಡಗಿನ ಗೌಡಸಮಾಜ, ವಿದ್ಯಾಸಂಘ ಹಾಗೂ ಇನ್ನಿತರ ಸಂಘ ಸಂಸ್ಥೆಗಳು ಒಟ್ಟು ಸೇರಿ ಈ ಕಾರ್ಯವನ್ನು ನೇರವೇರಿಸಲೆಂದು ನನ್ನ ಕಳಕಳಿಯ ಮನವಿ.

# ಅಲ್ಲೇ ನನ್ನ ಮನೆ ಇಲ್ಲಿಗೇಕೆ ಬಂದೆ ?

ನಮ್ಮ ಹಿರಿಯರಿಂದ ಕೇಳಿ ತಿಳಿದ ಕಥೆ ಹೀಗಿದೆ. ಪೂರ್ವದಲ್ಲಿ ನಮ್ಮ ಮನೆ ಕನ್ನಡ ಜಿಲ್ಲೆಯ ಸುಬ್ರಮಣ್ಯದ ಆಚೆ ಬೆಳ್ಳಾರೆಯಾಗಿತ್ತಂತೆ. ಅಲ್ಲಿ ಇದ್ದವರು ಕೊಡಗಿಗೆ ಹೇಗೆ ಬಂದೆವು? ಈ ಪ್ರಶ್ನೆಗೆ ಕೊಡಗಿನಲ್ಲಿ ಇಕ್ಕೇರಿ ಮನೆತನದ ರಾಜವಂಶದ ಓರ್ವ ಜಂಗಮ ವೇಷದಲ್ಲಿ ಹಾಲೇರಿಯಲ್ಲಿ ಬಂದು ಗುರುಮಠ ಸ್ಥಾಪಿಸಿ ಜನರಿಗೆ ವಿದ್ಯಾಭ್ಯಾಸ ಮಾಡಲು ಪ್ರಾರಂಭಿಸಿ ಇಲ್ಲೇ ತಳವೂರಿದನಂತೆ. ಆತನ ಮೂವರು ಗಂಡು ಮಕ್ಕಳ ಪೈಕಿ ಹಿರಿಯವನು ದೊಡ್ಡವೀರ. ಎರಡನೆಯವನು ಮುದ್ದ, ಮೂರನೆಯವನು ಮುದ್ದಯ್ಯ. ಇವರು ದೊಡ್ಡವರಾದಾಗ ದೊಡ್ಡವೀರನು ಮಡಿಕೇರಿಯನ್ನು, ಎರಡನೆಯವನು ಹಾಲೇರಿಯಲ್ಲಿ ಮೂರನೇ ಮುದ್ದಯ್ಯನು ಹೊರಮಲೆನಾಡನ್ನು ತಮ್ಮ ಬದುಕಿಗೆ ಆರಿಸಿಕೊಂಡರಂತೆ.

ದೊಡ್ಡವೀರನು ತನ್ನ ಜಾಣ್ಮೆಯ ಮೂಲಕ ಸುತ್ತಲಿನ ಜನರ ವಿಶ್ವಾಸಗಳಿಸಿ "ಕೊಡಗು ದೇಶ" ಸ್ಥಾಪಿಸಿ ರಾಜ್ಯವಾಳಿದನೆಂದು, ಆತನಿಗೆ ಕೊನೆಯವರೆಗೂ ಮಕ್ಕಳಾಗದ್ದರಿಂದ ಕೊನೆಯ ಚತುರನಾದ ಹೊರಮಲೆ ಮುದ್ದಯ್ಯನಿಗೆ ಪಟ್ಟ ಕಟ್ಟಿದನಂತೆ. ಈತನು ಮಾದಾಪುರದ ಮುಂದೆ ಸಕಲೇಶಪುರದ ಭಾಗವಾದ ಸೋಮವಾರಪೇಟೆ ಭಾಗವನ್ನು ಗೆದ್ದುಕೊಂಡು ಪುಷ್ಪಗಿರಿ ಇಳಿದು ಕನ್ನಡ ಜಿಲ್ಲೆಯ ಬೆಳ್ಳಾರೆವರೆಗೆ ವಿಸ್ತರಿಸಿ ಹೀಗೆ ಹೇಳಿದನಂತೆ. "ನಿಮಗೆ ನನ್ನ ಅಂಗರಕ್ಷಕ ಪಡೆಯಲ್ಲಿ ಸೇರಿಕೊಳ್ಳುವ ಇಚ್ಛೆಯುಳ್ಳವರು ನನ್ನನ್ನು ಮಡಿಕೇರಿಗೆ ಬಂದು ಕಾಣಿರಿ" ಎಂದು ತಿಳಿಸಿ ಮಡಿಕೇರಿಗೆ ಬಂದನಂತೆ. ಈ ಸಮಯದಲ್ಲಿ ಕೊಡಗು ವಿಶಾಲ ಕೊಡಗೆನಿಸಿಕೊಂಡಿತು.

ಕೆಲ ಸಮಯದ ನಂತರ ಪೂರ್ವಜರ ಓರ್ವ ತಂದೆಯ ಆರು ಗಂಡು ಮಕ್ಕಳ ಮಧ್ಯ ಯಾವುದೊ ಕಾರಣಕ್ಕೆ ಭಿನ್ನಾಭಿಪ್ರಾಯವಾಗಿ ಮೂವರು ರಾಜನನ್ನು ಕಂಡರಂತೆ. ರಾಜನು ನುಡಿದಂತೆ ನಡೆದುಕೊಂಡು ಅವರನ್ನು ತನ್ನ ಅಂಗರಕ್ಷಕ ಪಡೆಯಲ್ಲಿ ಸೇರಿಸಿಕೊಂಡು, ಹಿರಿಯವನು ಹಾಲೇರಿಯಲ್ಲೂ, ಎರಡನೆಯವನು ಗಾಳಿಬೀಡುವಿನಲ್ಲೂ, ಮೂರನೆಯವನು ಸುಂಟಿಕೊಪ್ಪದ ಹತ್ತಿರ ಬಾಳುಗೋಡಿನಲ್ಲಿ ನೆಲೆಸಿದರಂತೆ. ಆದರೆ ಇವರ ಮನೆ ಹೆಸರುಗಳು ಹಾಲೇರಿಯವರದು ಒಂದು ಹೆಸರಾದರೆ, ಗಾಳಿಬೀಡಿನವರದು ಮತ್ತೊಂದು. ಅಂದರೆ ಆಯಾ ಮಣ್ಣಿನ ಹೆಸರು. ಈಗಿನ ನಾಡು ಕಛೇರಿ ಕುಳಸಂಖ್ಯೆಯನ್ನು ಗಮನಿಸಿದರೆ ಈ ಮನೆಯವರು ಕೊಡಗಿನ ಇತರ ಜನಾಂಗದ ಮಧ್ಯ ಮುಖ್ಯವಾಹಿನಿಯಲ್ಲಿ ಬದುಕಿಕೊಂಡಿದ್ದಾರೆ. ಆದ್ದರಿಂದ ನಮ್ಮ ಕೊಡಗಿನ ಗೌಡ ಜನಾಂಗದ ಹಿರಿತನ ಇತರ ಜನಾಂಗದಂತೆ ಪ್ರಥಮ ಸ್ಥಾನದಲ್ಲಿ ಬೆಳೆದು ಬಂದಿರುವುದು ಅರ್ಥಪೂರ್ಣವಾಗುತ್ತದೆ.

ರಾಜನ ಅಂಗ ರಕ್ಷಕ ಪಡೆಗೆ ನಿಯೋಜಿತರಾದ ಈ ಮಂದಿಗೆ ರಾಜನ ಹುಕುಂ ಜಾರಿ ಹೀಗೆ ಇತ್ತಂತೆ. "ಗಂಡಸಾದವನು ವೀರ ಯೋಧರ ಉಡುಪಾದ ಕುಪ್ಪಸದಟ್ಟಿ ತೊಟ್ಟುಕೊಂಡು ರಾಜನ ಕರೆಗೆ ಸದಾ ಸಿದ್ಧರಾಗಿಯೇ ಇದ್ದುಕೊಂಡು ತನ್ನ ಒಕ್ಕಲುತನ ಕೆಲಸದಲ್ಲಿ ನಿರತರಾಗಿರುವುದು. ಹೆಂಗಸಾದವಳು ಬೆಳಗ್ಗೆ ಎದ್ದು ಮೊದಲು ಸ್ನಾನ ಮಾಡಿ, ಬುತ್ತಿ ಕಟ್ಟಿ ಅದನ್ನು ಕೈಗೆ ಬೇಗ ಸಿಕ್ಕುವ ಕಡೆ ತೂಗು ಹಾಕಿ ಅದರೊಂದಿಗೆ ಒಡಿಕತ್ತಿ ಇಟ್ಟು ಆನಂತರ ತನ್ನ ಕೆಲಸದಲ್ಲಿ ತೊಡಗುವುದು. ಹೀಗೆ ರಾಜನ ಕರೆ ಬಂದಕೂಡಲೆ ಆತ ಮದುಮಗನಾಗಿ ಹಸೆಯಲ್ಲಿ ಕೂತಿದ್ದರೂ ತಿರುಗಿ ನೋಡದೆ ಹೋಗುವ ನಿಯಮವಿತ್ತಂತೆ. ಶಾಂತಿ ಕಾಲದಲ್ಲಿ ಇವರು ಒಕ್ಕಲುತನ ಮಾಡಿಕೊಂಡು ರಾಜನಿಗೆ ಸಲ್ಲಬೇಕಾದ ಕಂದಾಯ ಕಾಣಿಕೆಗಳನ್ನು ಕೊಡುತ್ತಿದ್ದರಂತೆ. ಯುದ್ಧಕಾಲದಲ್ಲಿ ಶೌರ್ಯ ತೋರಿದವರಿಗೆ ರಾಜ ಉಂಬಳಿ ಅಥವಾ ಜಹಗೀರು ಕೊಡುವ ಸಂಪ್ರದಾಯವಿತ್ತಂತೆ. ಜಮ್ಮ ಭೂಮಿ ಪಡೆದಿರುವ ಮನೆತನದಲ್ಲಿ ಸ್ವಲ್ಪ ಉಂಬಳಿ ಅಥವಾ ಜಹಗೀರು ಭೂಮಿಗಳು ಇರುವುದನ್ನು ನಾವು ಈಗಲೂ ಗೌಡರಲ್ಲಿ ಕಾಣುತ್ತೇವೆ ಹೀಗೆ ಕುಪ್ಪಸದಟ್ಟಿ, ಒಡಿಕತ್ತಿ ಕೊಡಗು ರಾಜರ ಆಡಳಿತ ಕಾಲದುದ್ದಕ್ಕೂ ನಿತ್ಯ ಉಡುಪಾಗಿ ಮದುವೆಗೂ, ಮಂದುವಿಗೂ, ಇಂದಿಗೂ ಮುಂದುವರೆದುಕೊಂಡು ಬಂದಿದೆ ಎನ್ನಬಹುದು ಈ ಹಕ್ಕು ಕನ್ನಡ ಜಿಲ್ಲೆಯವರಲ್ಲಿ ಕಂಡುಬರುವುದಿಲ್ಲ. ಅವರು ವಿಶಾಲ ಕೊಡಗಿನ ಆಡಳಿತಕ್ಕೆ ಒಳಪಟ್ಟಿದ್ದರೂ ಸಹ ರಾಜನ ಅಂಗರಕ್ಷಕ ಪಡೆಯಲ್ಲಿ. ಸೇರ್ಪಡೆಯಾಗದೇ ಉಳಿದಿರುವುದು ಇದಕ್ಕೆ ಕಾರಣವೆನ್ನಬಹುದು.

ತದನಂತರದಲ್ಲಿ ಬ್ರಿಟಿಷ್ ಆಡಳಿತದಲ್ಲಿ ಅಪರಂಪರ ಕಲ್ಯಾಣಪ್ಪನ ಅಮರಸುಳ್ಯ ರೈತದಂಗೆಯ ಬಲಾಬಲ ಅಭ್ಯಸಿಸಿದ ಬ್ರಿಟಿಷರು ಒಡೆದು ಆಳುವ ನೀತಿ ಅನುಸರಿಸಿ ಗೌಡರ ಮತ್ತು ಕೊಡವರ ಮಧ್ಯ ಅಡ್ಡಗೆರೆ ಎಳೆದು ಕಡಮಕಲ್ಲಿನಿಂದ ಆಚೆಗೆ ಕನ್ನಡ ಜಿಲ್ಲೆ ಎಂತಲೂ, ಈಚೆಗೆ ಕೊಡಗು ಎಂದು ಬೇರ್ಪಡಿಸಿ ಬಲಾಢ್ಯ ಗೌಡ ಸಂಘಟನೆಯನ್ನು ಮೊಟಕುಗೊಳಿಸಿ, ಆಡಳಿತಕ್ಕೆ ಅಂದರೆ ಮುಖ್ಯಕಛೇರಿ ಮಡಿಕೇರಿಗೆ ಕನ್ನಡ ಜಿಲ್ಲೆಯವರಿಗೆ ಬರಲು ಅನಾನುಕೂಲ ಇದ್ದುದ್ದನ್ನು ತಪ್ಪಿಸಲು ಹೀಗೆ ಮಾಡಿದೆವು ಎಂಬ ನೆಪ ಹೂಡಿ ಜನರನ್ನು ಮಂಕು ಮಾಡಿದರು ಎಂದು ಹಿರಿಯರು ಹೇಳುತ್ತಾರೆ.

ಹೀಗಾಗಿ ನನ್ನ ಮನೆಯವರು ಅಲ್ಲಿ, ನಾನು ಇಲ್ಲಿ ಎಂದಾಗಿದೆ. ಈ ಭಾವನೆ ಶತಮಾನಗಳು ಉರುಳಿದರೂ ಅಂತರಾಳದಲ್ಲಿ ನಮ್ಮ

ಜನರಿಂದ ದೂರಾಗದೆ ಉಳಿದಿದೆ. ಇದನ್ನು ಒಂದಾಗಿ ಬೆಸೆಯಲು ಈಗಿನ ಪೀಳಿಗೆ ಕೆಲವು ಪ್ರಯತ್ನಗಳನ್ನು ಮಾಡುತ್ತಾ ಬಂದಿದೆ. ದಕ್ಷಿಣಕನ್ನಡ, ಕೊಡಗು ಮತ್ತು ಒಕ್ಕಲಿಗರ ವಿದ್ಯಾ ಸಂಘಗಳು ಮತ್ತು ಗೌಡ ಸಮಾಜಗಳು ಗೌಡ ಸಾಂಸ್ಕೃತಿಕ ಮೇಳಗಳ ಮೂಲಕ ಒಂದುಗೂಡಿಸಲು ಪ್ರಯತ್ನಗಳು ನಡದೇ ಇವೆ. ಮುಂದೆಯೂ ನಡೆಯಬಹುದು.

ನಾನು ದಕ್ಷಿಣಕನ್ನಡ ಸುಳ್ಯದಲ್ಲಿ ನಡೆದ ಗೌಡ ಸಮ್ಮೇಳನ ಮತ್ತು ಭಾಗಮಂಡಲದಲ್ಲಿ ನಡೆದ ಗೌಡ ಸಮ್ಮೇಳನ ಇವೆರಡನ್ನು ನೋಡಿದ್ದೇನೆ ಈ ಬೃಹತ್ ಸಂಘಟನೆಯಲ್ಲಿ ನಮ್ಮ ಗೌಡ ಜನಾಂಗದ ಭಾವನೆಗಳನ್ನು ಗುರುತಿಸಿದ್ದೇನೆ. ಕೊಡಗಿನ ಗೌಡರಿಗೆ ಕುಪ್ಪಸದಟ್ಟಿ,ಗೇಂಟೆಸೀರೆ ಉಡುಪು ಬೇಕು. ದ. ಕ. ದವರಿಗೆ ಅಡ್ಡ ಪಂಚೆ, ಸೆರಗು ಸೀರೆ ಬೇಕು. ಒಕ್ಕಲಿಗರಿಗೆ ಕುಡುತ, ಟಿಷರ್ಟು, ಪಂಚೆ ಸೆರಗು ಸೀರೆ ಬೇಕು. ಈ ಮೂರು ವಿಧಧ ಉಡುಪು ಧರಿಸಿ ಇವರನ್ನು ಒಂದೆಡೆ ಸೇರಿಸಿದರೆ ನಾವು ಒಂದೆ ಜನಾಂಗದ ಸಂಪ್ರದಾಯಸ್ತರು ಎನ್ನಬಹುದೇ? ಖಂಡಿತ ಸಾಧ್ಯವಿಲ್ಲ ಎಂಬುದು ನನ್ನ ಅಭಿಪ್ರಾಯ. ಇದು ಸಾಧ್ಯವಾದರೆ ಒರಟುಸ್ವಭಾವದವರಿಗೆ ಮಾತ್ರ. ಈ ನ್ಯೂನತೆಯನ್ನು ಕೊಡಗಿನ ಗೌಡರ ಪಿತಾಮಹ ದಿವಂಗತ ನಿಡ್ಯಮಲೆ ಮುದ್ದಪ್ಪನವರು ಈ ಮೂವರೊಳಗೆ ಏಕರೂಪತೆಯನ್ನು ಕಂಡುಕೊಳ್ಳಲು ಕಚ್ಚೆ ಪಂಚೆ ಪೇಟ ಗಂಡಸರಿಗೂ, ಸೆರಗು ಸೀರೆ ಹೆಣ್ಣುಮಕ್ಕಳಿಗೂ ನಡೆದು ಬರಲಿ ಎಂದು ಮೇಲ್ಪಂಕ್ತಿಹಾಕಿಕೊಟ್ಟುಸತ್ತುಹೋದರು. ಇದು ನಮ್ಮ ಜನರಿಗೆ ಇಷ್ಟುಬೇಗ ಮರೆತು ಹೋಯಿತೆ? ಅಲ್ಲಾ ಹಿರಿಯರ ಮಾತು ಕಾಲು ಕಸವಾಯಿತೆ? ನಮ್ಮ ಮೇಳಗಳಲ್ಲಿ ಕುಪ್ಪಸ ದಟ್ಟಿ, ಒಡಿಕತ್ತಿ ಮತ್ತು ಹರಿಹಬ್ಬಗಳಲ್ಲಿ ಸಾಕ್ಷ್ಯಚಿತ್ರಗಳಲ್ಲಿ ಪ್ರದರ್ಶಿಸುವುದು ಉಚಿತವೆಂಬುದು ನನ್ನ ಅಭಿಪ್ರಾಯ. ಭಾಗಮಂಡಲದ ಸಮ್ಮೇಳನದಲ್ಲಿ ಕುಪ್ಪಸದಟ್ಟಿ, ಗೇಂಟೆ ಸೀರೆ ಪ್ರದರ್ಶಿಸಿದ್ದು ಸಮಂಜಸವಾಗಿತ್ತು.

ನಮ್ಮ ಕೊಡಗಿನ ಗೌಡ ಜನಾಂಗದಲ್ಲಿ ಒಂದು ಸಂಕುಚಿತ ಭಾವನೆ ಮನೆಮಾಡಿದೆ. ಕೊಡಗಿನ ಹಬ್ಬಗಳಲ್ಲಿ ಕುಪ್ಪಸದಟ್ಟಿ ಕಡ್ಡಾಯವಾಗಿ ತೊಡಬೇಕಲ್ಲ? ಅದನ್ನು ತ್ಯಜಿಸಬೇಕೆ? ಅಗತ್ಯವಿಲ್ಲ. ಇದನ್ನು ಸ್ವಲ್ಪ ಸೂಕ್ಷ್ಮವಾಗಿ ಅಭ್ಯಸಿಸಿದರೆ ಕೊಡಗಿನ ಯಾವ ದೇವಾಲಯವೂ ಗೌಡರಿಂದಾಗಲಿ ಕೊಡವರಿಂದಾಗಲಿ ಕಟ್ಟಲ್ಪಡಲಿಲ್ಲ. ಪ್ರತಿಯೊಂದು ದೇವಾಲಯವೂ ಪೌರಾಣಿಕವಾಗಿ ರಾಜ ಮಹಾರಾಜರು ಹಾಕಿಕೊಟ್ಟ ಮೇಲ್ಪಂಕ್ತಿಯಲ್ಲಿ ಅದು ನಡೆಯುತ್ತದೆ. ಇಲ್ಲಿಯು ವಿವಿಧತೆಯಲ್ಲಿ ಏಕತೆಯನ್ನು ಅಂದಿನಕಾಲದಲ್ಲಿಯೇ ಪ್ರತಿಬಿಂಬಿಸಿದೆ. ಇಲ್ಲಿ ಬಾಳೋಪಾಟ್ ಇಲ್ಲದೆ ಬೊಳಕಾಟ್ ಇಲ್ಲ. ಬೋಳಕಾಟ್ ಇಲ್ಲದ ಬಾಳೋಪಾಟಿಲ್ಲ. ಲಾವಣಿಕಾರರು ಹೀಗೆ ಹಾಡುತ್ತಾರೆ. ಬಾಳೋ ಬಾಳೋ ನಂಗಡ, ದೇವ ಬಾಳ್ ಎಂಗಡ. ಅಂದರೆ ಬಾಳ್ವೆ ನಮ್ಮದು. ಅದು ದೇವರ ಬಾಳ್ವೆ ಎಲ್ಲರದು. ಆಗ ಕುಣಿಯುವವರು ಹೀಗೆ ಹೇಳಿ ಕುಣಿಯುತ್ತಾರೆ. ಧುಮ್ಮ ಥೈ ಥೈ ಹೋ ಹೋ ಹೊಯ್ಯ ತಕ್ಕಥೈಥೈ ಹೋಹೋ ಹೊಯ್ಯ ಮೊದಲಿನ ಚರಣ ನಾನು ಕುಣಿಯುತ್ತೇನೆ ಚೆನ್ನಾಗಿ ಕೊಟ್ಟು, ಮುಖ್ಯಸ್ಥ ಕುಣಿಯುತ್ತಾನೆ ಚೆನ್ನಾಗಿ ಕೊಟ್ಟು. ಇಲ್ಲಿ ಲಾವಣಿ ಕೊಡವ ಭಾಷೆಯಲ್ಲಾದರೆ ಹೋ ಹೋ ಹೊಯ್ಯ ಇದು ಅಚ್ಚಕನ್ನಡ. ಆದ್ದರಿಂದ ನಮ್ಮ ಪೂರ್ವಜರು ಜನಾಂಗದೊಳಗೆ ಯಾರಿಗೂ ಅಗೌರವ ಭಿನ್ನಾಭಿಪ್ರಾಯ ಆಗದ ಹಾಗೆ ಭಾವಕ್ಯತೆಯನ್ನು ಕಾಪಾಡಿದ್ದಾರೆ. ಕೊಡವರು ನಮ್ಮೆ ಅಂದರೆ ನಾವು ಹಬ್ಬ ಅಂತಲೂ, ಅವರು ಕೈಲ್ ಪೋದು ಅಂದರೆ ನಾವು ಕೈಲ್‌ಮುಹೂರ್ತವೆಂತಲೂ ಅವರು ಪುತ್ತರಿ ಅಂದರೆ ನಾವು ಹುತ್ತರಿ ಅನ್ನುತ್ತೇವೆ. ಅದರಿಂದ ಈ ಜನಾಂಗೀಯ ವಿಪರ್ಯಾಸವನ್ನು ದೂರಮಾಡಲು ಅವರು ಮದುವೆ ಮುಂಜಿಯಲ್ಲಿ ಕುಪ್ಯ ಧರಿಸಿ ತಮ್ಮನ್ನು ತಾವೇ ಬೇರೆಯಾಗಿಯೇ ಗುರುತಿಸಿಕೊಂಡು ಈ ವರ್ಷ ಅದನ್ನು ವಿಶ್ವಕ್ಕೆ ಅವರ ಸಮ್ಮೇಳನದ ಮೂಲಕ ತೋರಿಸಿ ಕೊಟ್ಟಿರುವುದನ್ನು ನಾವು ಸ್ಮರಿಸಿಕೊಳ್ಳಬಹುದು. ಇದರಿಂದ ಕೊಡಗಿನ ಹಬ್ಬ ಹರಿದಿನಗಳು ಕೊಡವರ ಸಂಪ್ರದಾಯ ಎಂದು ಭಾವಿಸುವುದರಲ್ಲಿ ಹುರುಳಿಲ್ಲ. ಎಲ್ಲರಿಗೂ ಸಂಬಂಧಿಸಿದ್ದು.

○ **ಕೋಳುಮುಡಿಯನ ಕುಶಾಲಪ್ಪ**
ಗಾಳಿಬೀಡು

# ಗೌಡಕೇಸರಿ ದಿ॥ ಶ್ರೀ ನಿಡ್ಯಮಲೆ ಮುದ್ದಪ್ಪನವರ ಜೀವನ ಚರಿತ್ರೆ

● ಪ್ರೊ. ಪೂಜಾರಿ ನೊಣ್ಣಪ್ಪ

ಭಾಗ – ೩

1924ರ ವರೆಗೆ ಕೊಡಗು ಮತ್ತು ದಕ್ಷಿಣ ಕನ್ನಡ ಗೌಡರಲ್ಲಿ ಯಾರೊಬ್ಬರೂ ಪದವೀಧರರು ಇರಲಿಲ್ಲ. ವಿದ್ಯೆಯಲ್ಲಿ ಬಹಳ ಹಿಂದುಳಿದ ಸಮಾಜವಾಗಿತ್ತು. 1837ರ ಅಮರ ಸುಳ್ಯ ಕಾಟ್‌ಕಾಯಿಯಲ್ಲಿ ಗೌಡ ಮುಖಂಡರು ಬ್ರಿಟಿಷರನ್ನು ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆ (ಅಂದರೆ 1834ರಲ್ಲಿ ಕೊಡಗು ರಾಜ್ಯವು ಈಗಿನ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಮತ್ತು ಬೆಳ್ತಂಗಡಿ ತಾಲ್ಲೂಕಿನವರೆಗೆ ವಿಸ್ತರಿಸಿತ್ತು) ಯಿಂದ ಓಡಿಸಲು ಪ್ರಮುಖ ಪಾತ್ರ ವಹಿಸಿದ್ದು, ಬ್ರಿಟಿಷರ ಸಹಾನುಭೂತಿ ಕಡಿಮೆಯಾಗುವುದಕ್ಕೆ ಕಾರಣವಾಯಿತು. ವಿದ್ಯೆಯಲ್ಲಿ ಹಿಂದುಳಿದಿದ್ದರಿಂದ ಇವರ ಆರ್ಥಿಕ ಸ್ಥಿತಿ ಕುಂಠಿತಗೊಂಡಿತ್ತು.

ಈ ವಿಷಯವನ್ನು ಮನಗಂಡ ಸಮಾಜದ ಹಿರಿಯ ಅಂದರೆ ದಿವಂಗತ ಕುಂಬುಗೌಡನ ಕುಶಾಲಪ್ಪಗೌಡರ ನೇತೃತ್ವದಲ್ಲಿ 1908 ರಲ್ಲಿ ಕೊಡಗಿನಲ್ಲೂ ಹಾಗೂ 1909ರಲ್ಲಿ ದಕ್ಷಿಣಕನ್ನಡ ಜಿಲ್ಲೆಯಲ್ಲಿಯೂ ಗೌಡ ವಿದ್ಯಾ ಸಂಘವನ್ನು ಸ್ಥಾಪಿಸಲಾಯಿತು.

ಈ ಮುಖಂಡರು ಸಮಾಜದಲ್ಲಿ ಒಬ್ಬನನ್ನಾದರೂ ಪದವೀಧರನನ್ನಾಗಿ ಮಾಡಿ ಸಮಾಜದ ಜನರ ಕಷ್ಟಕಾರ್ಪಣ್ಯಗಳನ್ನು ಪರಿಹರಿಸುವ ಹಾಗೂ ಸರ್ಕಾರದೊಡನೆ ಹೋರಾಡುವವರಿಗಾಗಿ ಹಂಬಲಿಸುತ್ತಿದ್ದರು. 1933ರ ವರೆಗೆ ಯಾವನೊಬ್ಬ ಗೌಡನೂ ಸರ್ಕಾರದ ಗೆಜೆಟೆಡ್ ಉದ್ಯೋಗದಲ್ಲಿ ಇರಲಿಲ್ಲ. ಈ ಸಮಾಜದಲ್ಲಿ ಆಗಿನ ಕಾಲದಲ್ಲಿ ಅತೀ ದೊಡ್ಡ ಉದ್ಯೋಗವೆಂದರೆ ಪಾರುಪತ್ತೇಗಾರರು. ಇಂತಹವರಲ್ಲಿ ದಿ॥ ಕುಂಬುಗೌಡನ ಕುಶಾಲಪ್ಪನವರು ಮತ್ತು ದಿ॥ ನಿಡ್ಯಮಲೆ ರಾಮಪ್ಪನವರು ಪ್ರಮುಖರು. ದಿ॥ ಕುಂಬುಗೌಡನ ಕುಶಾಲಪ್ಪನವರು ಮಡಿಕೇರಿಯಲ್ಲೂ ದಿ॥ ನಿಡ್ಯಮಲೆ ರಾಮಪ್ಪನವರು ಭಾಗಮಂಡಲದಲ್ಲೂ ಸೇವೆ ಸಲ್ಲಿಸಿದರು. ದಿವಂಗತ ಕುಂಬುಗೌಡನ ಕುಶಾಲಪ್ಪನವರು ಮುಕ್ಕಂದೂರು ಗ್ರಾಮದವರು. ದಿ॥ ನಿಡ್ಯಮಲೆ ರಾಮಪ್ಪನವರು ಪೆರಾಜೆ ಗ್ರಾಮದವರು.

ನಿಡ್ಯಮಲೆ ರಾಮಪ್ಪನವರಿಗೆ ಮೂವರು ಪುತ್ರರು, ಇವರಲ್ಲಿ ಹಿರಿಯವರು ದಿ॥ ಬೆಳ್ಯಪ್ಪನವರು ಅವರ ನಂತರ ದಿ॥ ಮುದ್ದಪ್ಪನವರು, ಕೊನೆಯವರು ದಿ॥ ಸೋಮಣ್ಣನವರು. ಬೆಳ್ಯಪ್ಪನವರು ಮೆಟ್ರಿಕ್ ಆಗಿ ಚೀಫ್ ಕಮೀಷನರ್ ಕಛೇರಿಯಲ್ಲಿ ಹೆಡ್ ಮುನ್ಷಿ ಆಗಿದ್ದರು. ಕೊಡಗಿನ ಗೌಡ ಸಮಾಜದವರಲ್ಲಿ ಆಗಿನ ಕಾಲಕ್ಕೆ ಇವರದ್ದೇ ದೊಡ್ಡ ಹುದ್ದೆ ಆಗಿತ್ತು. ಬೆಳ್ಯಪ್ಪನವರು ತಮ್ಮ ತಮ್ಮಂದಿರ ವಿದ್ಯಾಭ್ಯಾಸಕ್ಕೆ ಕಾರಣ ಕರ್ತರಾಗಿದ್ದರು.

ಶ್ರೀ ಮುದ್ದಪ್ಪನವರು 1895ನೇ ಇಸವಿಯಲ್ಲಿ ಶ್ರೀ ರಾಮಪ್ಪನವರು ಮತ್ತು ತಂಗಮ್ಮನವರುಗಳ ಮಗನಾಗಿ ಜನ್ಮ ತಾಳಿದರು. ಶ್ರೀ ಮುದ್ದಪ್ಪನವರ ಅಣ್ಣ ಶ್ರೀ ಬೆಳ್ಯಪ್ಪನವರು ಮಡಿಕೇರಿಯಲ್ಲಿ ಕೆಲಸದಲ್ಲಿದ್ದರಿಂದ ತಮ್ಮ ಊರಿನ ಆಸ್ತಿಯನ್ನು ನೋಡಿಕೊಳ್ಳಲು ಮುದ್ದಪ್ಪನವರು ವ್ಯವಸಾಯವನ್ನು ಮಾಡಿಕೊಂಡು ಇರಬೇಕೆಂದೂ, ಇವರ ಇನ್ನೊಬ್ಬ ತಮ್ಮ ಶ್ರೀ ಸೋಮಣ್ಣನವರನ್ನು ಓದಿಸಬೇಕೆಂಬ ಇಚ್ಛೆಯನ್ನು ವ್ಯಕ್ತಪಡಿಸಿದಾಗ ಶ್ರೀ ಮುದ್ದಪ್ಪನವರು ತಾನೂ ಸಹ ಓದಬೇಕೆಂದು ಹಠ ಸಾಧಿಸಿದರು. ಅಲ್ಲದಿದ್ದರೆ ಅದಕ್ಕಾಗಿ ತಾನು ಸಿದ್ಧಾಪುರದ ಕಾಫಿತೋಟದಲ್ಲಿ ಕೆಲಸ ಮಾಡಿ ಸಂಪಾದಿಸಿ ಓದುತ್ತೇನೆಂದು ಹೇಳಿದ್ದರಿಂದ ಇವರನ್ನು ಅವರ 18ನೇ ವಯಸ್ಸಿನಲ್ಲಿ ಮಡಿಕೇರಿ ಕಾನ್ವೆಂಟಿಗೆ 4ನೇ ತರಗತಿಗೆ ಸೇರಿಸಿದರು. ಶ್ರೀ ಮುದ್ದಪ್ಪನವರ ಚತುರತೆಯನ್ನು ಕಂಡು ಆ ಶಾಲೆಯ ಉಪಾಧ್ಯಾಯರು ಇವರಿಗೆ ಡಬ್ಬಲ್ ಪ್ರಮೋಷನ್ ಕೊಟ್ಟಿದ್ದು, ನಂತರ ಮಡಿಕೇರಿ ಸೆಂಟ್ರಲ್ ಹೈಸ್ಕೂಲ್‌ನಲ್ಲಿ ಮೆಟ್ರಿಕ್ಯೂಲೇಷನ್‌ವರೆಗೆ ಓದಿ ಮಂಗಳೂರಿನ ಸೆಂಟ್ ಅಲೋಸಿಯೆಸ್ ಕಾಲೇಜಿನಲ್ಲಿ ಇಂಟರ್ ಮೀಡಿಯೇಟ್ ಪಾಸಾದ ನಂತರ ಅವರ ವಿದ್ಯಾಭ್ಯಾಸವನ್ನು ಮುಂದುವರಿಸಲು ಹಣಕಾಸಿನ ತೊಂದರೆಯಾಗಿ ಮುಂದಿನ ವಿದ್ಯಾಭ್ಯಾಸವನ್ನು ಮಾಡುವ ಬಗ್ಗೆ ಬೆಳ್ಯಪ್ಪನವರಲ್ಲದೆ, ಸಮಾಜದ ಹಿರಿಯರೂ ಸಹ ಚಿಂತಿಸುತ್ತಿದ್ದರೆಂದು ನನ್ನ ಹಿರಿಯರು ಮಾತನಾಡುತ್ತಿದ್ದುದ್ದನ್ನು ನಾನು ಕೇಳಿದ್ದೇನೆ. ಅಂದಿನ ಸಮಾಜದ ಮುಂದಾಳುಗಳಾದ ದಿವಂಗತ ಕೆದಂಬಾಡಿ ಸುಬ್ರಾಯನವರು, ಶಿರಕಜೆ ಪೊನ್ನಪ್ಪನವರು, ಶ್ರೀ ತೆಕ್ಕಡ ಮುತ್ತಣ್ಣನವರು ಮೊದಲಾದ ಹಿರಿಯರೂ ಸೇರಿ ಮುದ್ದಪ್ಪನವರ ಚತುರತೆಯನ್ನು ತಿಳಿದು, ಇವರ ವಿದ್ಯಾಭ್ಯಾಸದ ಮುಂದುವರಿಕೆಗೆ ಯಾವುದಾದರೊಂದು ದಾರಿ ಹುಡುಕಬೇಕೆಂದು ಯೋಚಿಸಿ ಆಗಿನ ಕಾಲದಲ್ಲಿ ಗೌಡ ಸಮೂಹದಲ್ಲಿ ಧನಿಕರಾಗಿದ್ದ ಸುಳ್ಯದ ಹತ್ತಿರದ ಐವರ್‌ನಾಡಿನ ಮಡ್ತಿಲ ಬೆಳ್ಯಪ್ಪನವರನ್ನು ಭೇಟಿ ಮಾಡಿ ಅವರಿಗಿದ್ದ ಒಬ್ಬಳೇ ಪುತ್ರಿಯಾದ ದೇವಮ್ಮನವರನ್ನು ಶ್ರೀ ಮುದ್ದಪ್ಪನವರಿಗೆ ವಿವಾಹ ಮಾಡಿಕೊಡುವಂತೆಯೂ ಹಾಗೂ ಶ್ರೀ ಮುದ್ದಪ್ಪನವರ ಓದಿಗೆ ಸಹಾಯ ಮಾಡಬೇಕೆಂದು ಮಾತುಕತೆ ನಡೆಸಿ, ಶ್ರೀ ಮುದ್ದಪ್ಪನವರ ವಿದ್ಯಾಭ್ಯಾಸವನ್ನು ಮುಂದುವರಿಸುವ ಏರ್ಪಾಡನ್ನು ಮಾಡಿದರೆಂದು ಹೇಳಿದನ್ನು ನಾನು ಕೇಳಿದ್ದೇನೆ.

ಅದರಂತೆ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಶ್ರೀ ಮುದ್ದಪ್ಪನವರು ಮದ್ರಾಸ್‌ಗೆ ತೆರಳಿದರು.

[ ಮುಂದುವರಿಯುವುದು ]

# ಅರೆಭಾಷೆ ಗೌಡರಲ್ಲಿ ಕ್ರಾಂತಿಯಾದೀತೆ ?

ಗೌಡ ಎಂದಾಕ್ಷಣ ನಮಗೆ ಹೊಳೆಯುವುದು ಯಜಮಾನ. ಗೌಡರಲ್ಲಿ ಹತ್ತಾರು ಪಂಗಡಗಳಿವೆ. ನಮ್ಮ ದೇಶದಲ್ಲಿ ಒಂದೊಂದು ರಾಜ್ಯಕ್ಕೆ ಹೋದರೆ ಗೌಡರನ್ನು ಪ್ರಾದೇಶಿಕತೆಗೆ ತಕ್ಕಂತೆ ಒಂದೊಂದು ಹೆಸರಿನಲ್ಲಿ ಕರೆಯುತ್ತಾರೆ. ಆದರೆ ಸಾಮಾನ್ಯವಾಗಿ ಪರಸ್ಪರ ಈ ಸಮುದಾಯದವರು ಭೇಟಿಯಾದಾಗ ಪ್ರಾದೇಶಿಕತೆಯಲ್ಲಿ ಎಂದರೆ ಕನ್ನಡಿಗ, ಮಲೆಯಾಳಿ, ತಮಿಳ, ತೆಲುಗ, ಮರಾಠಿ, ಹಿಂದಿ ಹಾಗೂ ಇನ್ನಿತರ ರೀತಿಯಾಗಿ ಗುರುತಿಸಿಕೊಳ್ಳುತ್ತಾರೆ. ಈ ರೀತಿಯಾಗಿ ಇರುವ ಗೌಡ ಜನಾಂಗ ರಾಜ್ಯದಲ್ಲಾಗಲೀ, ದೇಶದಲ್ಲಾಗಲಿ ಒಂದೇ ವೇದಿಕೆಗೆ ಬರುವುದಿಲ್ಲ. ಆದರೆ ಜಿಲ್ಲಾವಾರು ವಿಂಗಡಣೆ ಮಾಡಿದಾಗ ಇವರಿಗೆ ದೇಶದಲ್ಲಿಯೇ ಇಲ್ಲದಿರುವ ಅಭಿಮಾನ, ಗತ್ತು, ನಾನು ಗೌಡ, ನಾನು ಕೊಡಗಿನ ಗೌಡ, ದಕ್ಷಿಣ ಕನ್ನಡ ಗೌಡ, ಮೈಸೂರು ಗೌಡ ಮಂಡ್ಯ ಗೌಡ, ಹಾಸನ ಗೌಡ ಎಂಬುದಾಗಿ ಗುರುತಿಸಿಕೊಳ್ಳುತ್ತಾರೆ. ಆದರೆ ಈ ಗೌಡರಲ್ಲಿ ಕೊಡಗಿನಲ್ಲಿ ಇರುವ ಅರೆಭಾಷೆ ಗೌಡರ ಗತ್ತು, ಸಂಪ್ರದಾಯ, ಉಡಿಗೆ–ತೊಡಿಗೆ, ಆಚಾರ–ವಿಚಾರವೇ ಬೇರೆ. ಆದುದರಿಂದ ಸಮಾಜದಲ್ಲಿ ಈ ಕೊಡಗಿನ ಅರೆಭಾಷೆ ಗೌಡರು ಈ ಎಲ್ಲಾ ಗೌಡರಿಗಿಂತ ಭಿನ್ನವಾಗಿ ಗುರುಸಿತಿಕೊಳ್ಳುತ್ತಾರೆ.

ಕೊಡಗಿನ ಅರೆಭಾಷೆ ಗೌಡರು ಮೊದಲಿನಿಂದಲೂ ನಿದ್ರಾವಸ್ಥೆಯಲ್ಲಿರುವುದು ನೂರಕ್ಕೆ ನೂರು ಸತ್ಯ. ಇದಕ್ಕೂ ಹಲವಾರು ಕಾರಣಗಳಿವೆ. ಒಂದನೆಯದಾಗಿ ಇದುವರೆಗೆ ಮಾನಸಿಕವಾಗಿ ತೀಕ್ಷ್ಣ ಹೊಡೆತ ಬೀಳದೇ ಇರುವುದು. ಆದರೆ ಅದರ ಅನಿವಾರ್ಯತೆ ಈಗ ಕಂಡುಬಂದಿದೆ. ಇದು ಎಷ್ಟರ ಮಟ್ಟಿಗೆ ಆಗಬಹುದೆಂದು ಕಾದು ನೋಡಬೇಕು. ಕೆಲವು ವರ್ಷಗಳ ಹಿಂದೆ ಇದೇ ರೀತಿಯ ಸಂಘಟನೆಗೆ ಎರಡು ಭಾರಿ ಪ್ರಯತ್ನಿಸಿ (1985 ಮತ್ತು 1996ರಲ್ಲಿ) ಅದರಲ್ಲೂ ಯಶ ಕಂಡು, ನಿಧಾನವಾಗಿ ಕುಂಠಿತವಾಯಿತು.

1985ರಲ್ಲಿ ಸುಳ್ಯದಲ್ಲಿ ಕುರುಂಜಿ ವೆಂಕಟರಮಣಗೌಡರ ಸಾರಥ್ಯದಲ್ಲಿ ನಡೆದು, ಇನ್ನೇನು ಅರೆಭಾಷೆ ಗೌಡರ ಸಂಘಟನೆ ಆಗಿಯೇ ಹೋಯಿತೆನ್ನಬೇಕು. ಈ ಸಮ್ಮೇಳನಕ್ಕೆ ಅರೆಭಾಷೆ ಗೌಡರು ಹೋದ ರೀತಿ ನೋಡಿದರೆ ಏನೋ ಸಾಧಿಸಿ ಬರುವಹಾಗೆ ಇದ್ದರು ! ಸಾಧಿಸಿಯೇ ಬಂದರು. ಏನನ್ನು? ಸಮ್ಮೇಳನದಲ್ಲಿ ಪಾಲ್ಗೊಂಡು, ನಾಯಿ ಬಾಲಕ್ಕೆ ಕೊಳವೆ ಹಾಕಿದ ಹಾಗೆ ಆಗಿಯೇ ಹೋಯಿತು. ನಂತರ ಇದಕ್ಕೆ ಪುನಃ ಚಾಲನೆ ದೊರೆತದು 1996ರಲ್ಲಿ. ಅದೇ ನಾಯಕ, ಅದೇ ಜನ. ಕೊನೆಗೆ ಆದದ್ದು ಮೊದಲಿನ ಹಾಗೆ. ಆದರೆ ಇದಕ್ಕೆ ಬಲವಾದ ಕಾರಣವಿದೆ.

1. ಅರೆಭಾಷೆ ಗೌಡರು ಆರ್ಥಿಕವಾಗಿ ಹಿಂದುಳಿದಿರುವುದು.
2. ಅವಿದ್ಯಾವಂತರ ಸಂಖ್ಯೆ ಇನ್ನೂ ಹೆಚ್ಚಿರುವುದು.
3. ಉದಾರತೆಯ ಮನೋಭಾವ ಇಲ್ಲದಿರುವುದು.

ಇತ್ತೀಚೆಗೆ ಇನ್ನೊಂದು ಕ್ರಾಂತಿಕಾರಿ ಬೆಳವಣಿಗೆಯಾಗಲು ಚಾಲನೆ ದೊರೆತಿದೆ. ಆದರೆ ಇದರ ಸಾರಥ್ಯ ಯಾರು ವಹಿಸುವುದು? ಪ್ರಜಾವೇದಿಕೆಯೇ? ಗೌಡ ಸಮಾಜದವರೇ? ಗೌಡ ಅಕಾಡಮಿಯವರೇ? ಮಹಿಳಾ ಒಕ್ಕೂಟವೇ? ಅಥವಾ ಹತ್ತಾರು ತಲೆ ಎತ್ತುತ್ತಿರುವ ಸಮಿತಿಯವರೇ? ಇದೂ ಒಂದು ಚಿದಂಬರ ರಹಸ್ಯದಂತಿದೆ. ಕೆಲವರು ಪ್ರಜಾವೇದಿಕೆಯಿಂದ ಎಂದರೆ, ಇನ್ನು ಕೆಲವರು ಗೌಡ ಸಮಾಜದವರೆನ್ನುತ್ತಾರೆ, ಕೆಲವರು ಗೌಡ ಅಕಾಡೆಮಿಯವರೆನ್ನುತ್ತಾರೆ. ಆದರೆ ಈಗ ನಡೆಯುತ್ತಿರುವ ಸಂಘಟನೆಯ ಹಾದಿಯನ್ನು ನೋಡಿದರೆ ಅಕಾಡೆಮಿಯ ಶಾಖೆಗಳು ಈ ಕಾರ್ಯಕ್ರಮ ಹಮ್ಮಿಕೊಂಡಂತೆ ಕಾಣುತ್ತಿದೆ. ಇಷ್ಟೆಲ್ಲಾ ಮಾಡಿದರೂ ಪರಸ್ಪಸ ವ್ಯಯಕ್ತಿಕ ದ್ವೇಶ, ಹಂದಿ, ಕೋಳಿ, ನಾಯಿ, ದನ, ಬೇಲಿ, ಆಸ್ತಿ-ಪಾಸ್ತಿಗೆ ನಡೆಯುವ ಜಗಳ ಮಾತ್ರ ಹಾಗೆಯೇ ಉಳಿದಿದೆ, ಅಲ್ಲದೆ ನ್ಯಾಯಾಲಯದ ಮೆಟ್ಟಿಲು ಹತ್ತುತ್ತಾರೆ. ಮೊದಲು ಆಗ ಬೇಕಾದದ್ದು ಈ ಕೆಳಮಟ್ಟದ ಸುಧಾರಣೆ. ಹಳ್ಳಿ ಮಟ್ಟದಲ್ಲಿ ಒಂದೊಂದು ಸಮಿತಿ ರಚನೆಯಾಗಿ ಅಲ್ಲಿಯ ಜಗಳ ಜಂಟೆಗಳನ್ನು ಸಮಿತಿಯವರಿಂದ ಅಲ್ಲಿಯೇ ತೀರ್ಮಾನ ಮಾಡಿ, ಕೋರ್ಟು-ಕಛೇರಿ ಹತ್ತದಂತೆ ತಡೆದು, ನ್ಯಾಯ ದೊರಕಿಸಿಕೊಟ್ಟು ಸಹಕರಿಸಿದರೆ, ನಂತರ ಅದು ಜಿಲ್ಲಾ ಮಟ್ಟದಲ್ಲಿ ರೂಪುಗೊಂಡರೆ ನಿಜವಾಗಿ ಸಂಘಟನೆಯಾಗಿದೆಯೆಂದು ತಿಳಿಯುವುದು ಸರಿ. ನಮ್ಮ ಜನಾಂಗ ಯಾವಾಗಲೂ ಒಂದೇ ಜಾಗದಲ್ಲಿ ಕೇಂದ್ರಿಕೃತವಾಗಿದ್ದರೆ ಅಲ್ಲಿ ಅಷ್ಟು ಬೇಗ ಸಂಘಟನೆಯ ಮನೋಭಾವ ಬರುವುದಿಲ್ಲ. ಬದಲಾಗಿ ತಮ್ಮ ತಮ್ಮ ಜಗಳಗಳಲ್ಲಿ ತೊಡಗಿ, ಬೇರೆ ಬೇರೆ ರಾಜಕೀಯದವರ ಹಿಂಭಾಲಕರಾಗಿ ರಾಜಕೀಯ ವೈರಿಗಳಾಗುತ್ತಾರೆ. ಇದು ಸಹಜ.

ನಮ್ಮ ಜನಾಂಗ ಒಗ್ಗಟ್ಟಾಗಬೇಕಾದರೆ ಅವನು ವಾಸವಾಗಿರುವ ಸ್ಥಳದಲ್ಲಿ ಅಲ್ಪಸಂಖ್ಯಾತರಾಗಿದ್ದು, ಜನಾಂಗದ ದೃಷ್ಟಿಯಲ್ಲಿ ಮಾನಸಿಕವಾದ ಹಿಂಸೆಯಾದರೆ ಬೇಗ ಸಂಘಟನೆಗೆ ಚಾಲನೆ ದೊರೆಯುತ್ತದೆ. ಸಂಘಟನೆ ಸರಿಯಾದ ಮಾರ್ಗದಲ್ಲಿ ಚಲಿಸುತ್ತದೆ. ಈ ರೀತಿ ಸಂಘಟನೆಯಾಗಬೇಕಾದರೆ ರಾಜಕೀಯವಾಗಿ ನಾವು ಸಂಘಟನೆಗಿಳಿಯಬಾರದು, ರಾಜಕೀಯ ಬಳಸಬಾರದು. ಹಾಗಾದರೆ ಮಾತ್ರ ನಮ್ಮ ಸಂಘಟನೆಗೆ ಶಕ್ತಿ ಬರುತ್ತದೆ, ಅಲ್ಲದೆ ಇದರಲ್ಲಿ ಯಶ ಕಾಣುತ್ತೇವೆ.

(7ನೇ ಪುಟ ನೋಡಿ)

# ನಾರೀ ಅಬಲೆಯೇ ?

**ಯಾ**ವ ಸ್ತ್ರೀಯು ಕೂಡ ಇಂದು ಅಬಲೆ ಎಂದು ಒಪ್ಪಿಕೊಳ್ಳುವುದಿಲ್ಲ. ಎಲ್ಲಾ ಕ್ಷೇತ್ರಗಳಲ್ಲಿಯೂ ಅವಳು ತನ್ನ ನೆಲೆಯನ್ನು ಹಿಡಿದಿದ್ದಾಳೆ. ಮನು ಹೇಳುವಂತೆ "ನ ಸ್ತ್ರೀ ಸ್ವಾತಂತ್ರ್ಯ ಮರ್ಹತೆ" ಅಂದರೆ ಸ್ತ್ರೀಗೆ ಸ್ವಾತಂತ್ರ್ಯವನ್ನು ಕೊಡಬಾರದು. ಸ್ತ್ರೀಯ ಕಿವಿಗಳ ಮೇಲೆ ಸಂಸ್ಕೃತಗಳ ಶ್ಲೋಕಗಳೇನಾದರು ಬಿದ್ದರೆ ಅವಳ ಕಿವಿಯನ್ನು ಎರಕದಿಂದ ಕಾಸಿ ಮುಚ್ಚಬೇಕು. ಎಂದು ಹೇಳಿದ್ದಾನೆ. ಆದರೆ ಈ ಮಾತನ್ನು ಇಂದು ಯಾರು ಒಪ್ಪುವುದಿಲ್ಲ. ಆದರೆ ಅದೇ ಸಂಸ್ಕೃತ ಗ್ರಂಥಗಳಲ್ಲಿಸ್ತ್ರೀಯ ಗೌರವಯುತವಾದ ಸ್ಥಾನಮಾನಕ್ಕೆ ಕುಂದು ಬಾರದಂತೆ ಶ್ರೇಷ್ಠವೆನಿಸಿದ್ದಾರೆ. ತಾಯಿಯಾಗಿ, ತಂಗಿಯಾಗಿ, ಸದ್ಗೃಹಿಣಿಯಾಗಿ ಪೂಜ್ಯನೀಯವಾಗಿದ್ದಾಳೆ. ಆದರೆ ಅವಳ ಒಡನಾಟ ಕೇವಲ ಮನೆಗೆ ಮಾತ್ರ ಸೀಮಿತಗೊಂಡಿತ್ತು.

ಇಂದು ಮತ್ತು ಹಿಂದಿನಿಂದಲೂ ಸ್ತ್ರೀ ತಮ್ಮ ಶೌರ್ಯ ಸಾಹಸಗಳ ಪ್ರತೀಕವಾಗಿ ತಾನು ಅಬಲೆಯಲ್ಲ, ಸಬಲಳೆಂದು ತೋರಿಸಿ ಕೊಟ್ಟಿದ್ದಾಳೆ. 'ನಾರಿ ಮುನಿದರೆ ಮಾರಿ' ಎಂಬ ಮಾತನ್ನು ಸತ್ಯವಾಗಿಸಿದ್ದಾಳೆ. ಸ್ತ್ರೀಯರು ಕವಿಗಳು ಹೌದು, ಕಲಿಗಳು ಹೌದು. ಯುದ್ಧರಂಗದಲ್ಲಿ ಹೋರಾಡಿದ ವೀರ ಮಹಿಳೆಯರು ಕಡಿಮೆ ಏನಿಲ್ಲ. ಸಾಹಿತ್ಯ, ವಿಜ್ಞಾನ, ಕಲೆ, ಸಂಗೀತ, ಕ್ರೀಡೆ ಎಲ್ಲಾ ಕ್ಷೇತ್ರದಲ್ಲಿಯೂ ಮಹಿಳೆಯ ಪಾತ್ರ ಸಿಂಹಪಾಲು. ಬ್ರಿಟಿಷರ ವಿರುದ್ಧ ಹೋರಾಡಿದ ಝಾನ್ಸಿ ರಾಣಿ ಲಕ್ಷ್ಮಿಬಾಯಿ, ಬ್ರಿಟಿಷ್ ಅಧಿಕಾರಿಯನ್ನು ಕೊಂದ ಕಿತ್ತೂರಿನ ರಾಣಿ ಚೆನ್ನಮ್ಮ, ಹೈದರಾಲಿಯ ಸೈನಿಕರು ಕಳ್ಳ ಕಿಂಡಿಯಿಂದ ಬರುತ್ತಿದ್ದಾಗ ಒನಕೆಯಿಂದಲೆ ಸದೆ ಬಡಿದ ಒನಕೆ ಓಬವ್ವ ಇನ್ನೂ ಮುಂತಾದವರು ಯುದ್ಧರಂಗವನ್ನು ಅಡಿಗೆ ಮನೆಗಿಂತಲೂ ಉಚಿತವಾಗಿ ಬಳಸಿಕೊಂಡಿದ್ದಾರೆ.

ಸಾಹಿತ್ಯ ಕ್ಷೇತ್ರದಲ್ಲಿ ಇವರ ಪಾತ್ರ ಹಿರಿದಾಗಿಯೇ ಇದೆ. ಮೀರಬಾಯಿ ತನ್ನ ಕೀರ್ತನೆಗಳಿಂದಲೇ ಜನರ ಮನಸ್ಸನ್ನು ಗೆದ್ದಳು. ಕನ್ನಡದ ಮೊದಲ ಕವಿಯತ್ರಿ ಎನಿಸಿಕೊಂಡ ಅಕ್ಕ ಮಹಾದೇವಿಯ ವಚನಗಳು ಸಾಹಿತ್ಯ ಕ್ಷೇತ್ರಕ್ಕೆ ಒಂದು ರೀತಿಯ ಸವಾಲುಗಳು. ಒಂದು ಸ್ತ್ರೀ ಹೇಳಬಾರದ ವಿಚಾರಗಳನ್ನು ಧೈರ್ಯವಾಗಿ ಸಂಕೋಚವಿಲ್ಲದೆ ಹೇಳಿದ್ದಾಳೆ. ಸಂಚಿ ಹೊನ್ನಮ್ಮ, ಹಂಪಿ ತಿರುಮಲಾಂಭ, ಅನುಸೂಯ......ಇವರ ಸಾಲುಗಳು ಬರೆದರೆ ಮುಗಿಯುವುದೆ ಇಲ್ಲ.

ಇಂದಿನ ವಿಜ್ಞಾನ ಯುಗದಲ್ಲಿ ಇವಳು ಎಲ್ಲಾ ರಂಗದಲ್ಲಿಯೂ ಕಾಲಿಟ್ಟಿದ್ದಾಳೆ. ಭೂಮಿಯಿಂದ ಆಕಾಶದವರೆಗೂ ತನ್ನ ಕಾರ್ಯಕ್ಷೇತ್ರ ಮಾಡಿಕೊಂಡಿದ್ದಾಳೆ. ಕಂಪ್ಯೂಟರ್‌ಗಿಂತಲೂ ವೇಗವಾಗಿ ಲೆಕ್ಕ ಮಾಡಬಲ್ಲ ಬೆಂಗಳೂರಿನ ಶಕುಂತಲದೇವಿಯ ಸಾಧನೆ ಅಮೋಘವಾದುದು. ಇತ್ತೀಚೆಗೆ ಭಾರತ ಮೂಲದ ಬಾಹ್ಯಕಾಶ ವಿಜ್ಞಾನಿ ಕಲ್ಪನ ಚಾವ್ಲ ಅಂತರಿಕ್ಷ ವಾಹನದಲ್ಲಿ ವಿಹರಿಸಿ ಬಂದು ಸಾಧನೆಗೈದಿದ್ದಾಳೆ. ವಿಮಾನ ಓಡಿಸುವ ಪೈಲೆಟ್ಟುಗಳು, ಬಸ್ಸು, ಕಾರು ಆಟೋರಿಕ್ಷಾ ಓಡಿಸುವ ಸ್ತ್ರೀಯರು ಕಡಿಮೆ ಏನಿಲ್ಲಿ.

ಕಲಾಕ್ಷೇತ್ರ ಇವಳಿಗೆ ನೀರು ಕುಡಿದಷ್ಟು ಸುಲಭ. ನೃತ್ಯ, ನಾಟಕ, ಸಿನಿಮಾ ಕ್ಷೇತ್ರಗಳಲ್ಲಿ ಇವರ ಸಾಧನೆಯ ಪಟ್ಟಿ ಮಾಡಲು ಪುಟಗಳೇ ಬೇಕಾಗುತ್ತವೆ. ಹಾಗೆಯೇ ಕ್ರೀಡಾಕ್ಷೇತ್ರದಲ್ಲಿಯೂ ಇವಳ ಸ್ಥಾನ ಕಿರಿಯದೆನಲ್ಲ. ಪಿ.ಟಿ. ಉಷಾ, ಅಶ್ವಿನಿ ನಾಚಪ್ಪ, ಶಾಂತ ರಂಗಸ್ವಾಮಿ ಮುಂತಾದವರು ರಾಷ್ಟ್ರಕ್ಕೆ ಕೀರ್ತಿ ತಂದ ಕ್ರೀಡಾಪಟುಗಳು.

ಇಷ್ಟೆಲ್ಲಾ ಸಾಧನೆಯನ್ನು ಮಾಡಿ ತೋರಿಸಿರುವ, ತೋರುತ್ತಿರುವ ಮಹಿಳೆಯನ್ನು ಅಬಲೆ ಎಂದು ಕರೆಯಲು ಹೇಗೆ ಸಾಧ್ಯ? ಆದರೆ ಪುರುಷ ಪ್ರಧಾನ ಸಮಾಜವು ಅಬಲೆ ಎಂಬ ಪಟ್ಟವನ್ನು ಕಟ್ಟಿ 'ಮನು' ಹೇಳಿದ ರೀತಿ ರಿವಾಜುಗಳನ್ನು ಬಿಟ್ಟುಕೊಡದ ಪುರುಷ ಸಮಾಜ ಅಬಲೆಯನ್ನಾಗಿ ಮಾಡಿದೆ ಅಷ್ಟೆ.

ಇಷ್ಟೇ ಅಲ್ಲದೆ ಸ್ತ್ರೀಯು ಮನೆಯಲ್ಲಿ ಮಾತೆಯಾಗಿ, ಮಡದಿಯಾಗಿ, ಶುಶ್ರೂಶಕಿಯಾಗಿ, ಸ್ನೇಹಿತೆಯಾಗಿ, ಜೊತೆಗೆ ತನ್ನ ಸಮಾಜದ ರೀತಿ, ನಿಯಮಗಳಿಗೆ ತಲೆಬಾಗಿ ನಡೆದು ಪುರುಷರಂತೆ ಸರಿಸಮಾನರಾಗಿ ದುಡಿಯುತ್ತಿರುವ ಮಹಿಳೆ ಅಬಲೆ ಹೇಗೆ ಆದಾಳು ? ಈ ಸಮಾಜದಲ್ಲಿ ಅವಳು ಸಬಲೆ ತಾನೆ ?

● **ನಾಟೋಳನ ದೇವಮ್ಮ ಪೊಣ್ಣಪ್ಪ**
ನಿರ್ದೇಶಕರು, ಕೊಡಗು ಗೌಡ ಮಹಿಳಾ ಒಕ್ಕೂಟ,
ಮಡಿಕೇರಿ

---

(6ನೇ ಪುಟದಿಂದ)

ಏನೇ ಆಗಲಿ ಶುಭ ಕೋರುವುದು ನಮ್ಮ ಕರ್ತವ್ಯ. ಈ ಭಾರಿಯಾದರು ನಮ್ಮ ಅರೆಭಾಷೆ ಗೌಡರು ಕ್ರಾಂತಿಕಾರಿ ಬದಲಾವಣೆ ತರಲಿ [ಸಂಘಟನೆಯಲ್ಲಿ] ಎಂದು ಬೇಡುತ್ತೇನೆ. (ಮೊದಲು ದೇವರಲ್ಲಿ ನಂತರ ಸಂಘಟಕರಲ್ಲಿ) ಹಾಗಾದಲ್ಲಿ ಕಾದು ನೋಡಬಹುದೆ? ಏನನ್ನು ? ಅರೆಭಾಷೆ ಗೌಡರಲ್ಲಿ ಕ್ರಾಂತಿಯಾದೀತೆ ? ಎಂಬುದನ್ನು.

● **ತಡಿಯಪ್ಪನ ಕುಮಾರಜಯ, ಅಧ್ಯಕ್ಷರು**
ಅರೆಭಾಷಿಕ ಸಾಂಸ್ಕೃತಿಕ ಸಮಿತಿ, ಮೈಸೂರು.

# ದಿನಾಂಕ 1-5-1998ರಲ್ಲಿ ಭಗಂಡ ಸನ್ನಿಧಿ ಭಾಗಮುಂಡಲದಲ್ಲಿ ಜರುಗಿದ ಹೋಬಳಿ ಮಟ್ಟದ ಬೃಹತ್ ಗೌಡ ಸಾಂಸ್ಕೃತಿಕ ಮೇಳ

ಕೊಡಗಿನ ಇತಿಹಾಸದಲ್ಲಿ ಗೌಡ ಜನಾಂಗಕ್ಕೆ ವಿಶಿಷ್ಟವಾದ ಸ್ಥಾನಮಾನ, ಅವರದೇ ಆದ ಸಂಪ್ರದಾಯ, ಉಡುಗೆ–ತೊಡಿಗೆ, ಆಚಾರ–ವಿಚಾರ, ನಡೆ-ನುಡಿ ಹೀಗೆ ಹಲವಾರು ರೀತಿಯಲ್ಲಿ ತನ್ನದೆ ಆದ ಸಂಸ್ಕೃತಿಯನ್ನು ಬೆಳೆಸಿಕೊಂಡು ಬಂದಿದೆ. ಎಂದೋ ನಡೆಯಬೇಕಾಗಿದ್ದ ಇಂತಹ ಸಮ್ಮೇಳನ ಇಂದು ನಡೆಯುತ್ತಿದೆಯಲ್ಲಾ ಎಂಬ ಸಂತೋಷ, ತಮ್ಮನ್ನು ಸಂಘಟನೆಗೆ ತೊಡಗಿಸಿಕೊಳ್ಳಬೇಕಾದ ಅನಿವಾರ್ಯತೆ, ಕೊಡಗನ್ನು ಅರೆ–ಭಾಷೆ ಪಾಳೇಗಾರರು ಆಳಿದುದನ್ನು ಪಟ್ಟೋಳಿ ಪಳಮೆಯಲ್ಲಿ ಕಾಣಬಹುದು. ಹಲವು ರಂಗಗಳಲ್ಲಿ ದುಡಿದ ಗೌಡ ಜನಾಂಗದ ಮಹಾನ್ ವ್ಯಕ್ತಿಗಳಿದ್ದರೂ, ಇತಿಹಾಸವನ್ನು ತಿರುಚಿ ಗೌಡ ಜನಾಂಗಕ್ಕೆ ಅಪವಾದ ಬರುವ ಹಾಗೆ ಮಾಡಿ, ದರೋಡೆಕೋರರೆಂದು ಹಣೆಪಟ್ಟಿ ಕಟ್ಟಿ, ತುಳಿತಕ್ಕೊಳಪಡಿಸಲಾಗಿ, ಮೂಲೆಗುಂಪಾಗಿಸಲಾಗಿದೆ. ಇದನ್ನೆಲ್ಲ ಧೈರ್ಯವಾಗಿ ಎದುರಿಸಿ ಮುಂದೆ ಬರಬೇಕೆಂದು ಕೃಷಿಕರೂ, ಸಮಾಜ ಸೇವಕರೂ, ಹುಟ್ಟು ಹೋರಾಟಗಾರರೂ ಹಾಗೂ ಚಿತ್ರ ನಿರ್ಮಾಪಕರೂ ಆದ ಎನ್.ಎಸ್. ದೇವಿಪ್ರಸಾದ್ ಗೌಡ ಜನಾಂಗದವರಿಗೆ ಕರೆಯಿತ್ತರು.

ಶ್ರೀಯುತರು ಮುಂದುವರೆದು ಕೊಡಗನ್ನು ಪ್ರತ್ಯೇಕಿಸಲು ಬಿಡಬಾರದು, ಪ್ರತ್ಯೇಕವಾದರೆ ಬ್ರಿಟಿಷರಿದ್ದಾಗ ಅನುಭವಿಸಿದ ಗುಲಾಮಗಿರಿಯನ್ನು ಪುನಃ ಕಾಣಬೇಕಾಗುತ್ತದೆ. ದೊಡ್ಡ ದೊಡ್ಡ ಹತ್ತು ತೋಟಗಳನ್ನು ಸೇರಿಸಿದರೆ ಕೊಡಗು ಆಗುತ್ತದೆ. ಇಂತಹ ಹತ್ತು ತೋಟಗಳಿಗೆ ಒಂದು ರಾಜ್ಯ ಕೇಳುವುದು ಎಷ್ಟು ಸರಿಯೆಂದು ಭಾಗಮಂಡಲದಲ್ಲಿ "ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ" ಹೋಬಳಿ ಮಟ್ಟದಲ್ಲಿ ಆಯೋಜಿಸಿದ್ದ ಗೌಡ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಬೃಹತ್ ಗೌಡ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

## ಕೊಡಗು ರಾಜ್ಯವಾಗುವುದಿಲ್ಲ – ಅಂಬರೀಶ್

ಇನ್ನೋರ್ವ ಮುಖ್ಯ ಅತಿಥಿ, ಸಿನಿಮಾ ತಾರೆ ಮತ್ತು ಮಂಡ್ಯ ಜಿಲ್ಲೆಯ ಸಂಸದರೂ ಆದ ಶ್ರೀಮಾನ್ ಅಂಬರೀಶ್ ಮಾತನಾಡಿ ಪ್ರಪಂಚದಲ್ಲಿಯೇ ಭಾರತದ ಸಂಸ್ಕೃತಿಗೆ ವಿಶಿಷ್ಟವಾದ ಸ್ಥಾನಮಾನವಿದೆ. ಭಾರತದಲ್ಲಿ ಕರ್ನಾಟಕಕ್ಕೆ, ಕರ್ನಾಟಕದಲ್ಲಿ ಕೊಡಗಿಗೆ ಅವರದ್ದೆ ಆದ ಸಂಸ್ಕೃತಿಯಲ್ಲಿ ವಿಶಿಷ್ಟವಾದ ಸ್ಥಾನಮಾನವಿದೆ. ಹೀಗಿರುವಾಗ ಈ ಸಂಸ್ಕೃತಿಯನ್ನು ಒಡೆಯಲು ಬಿಡಬಾರದು. ಕೊಡಗೆಂದರೆ ಮಂಡ್ಯದವರಿಗಲ್ಲಿಲ್ಲದ ಅಕ್ಕರೆ. ನಾವು ಕೊಡಗಿನವರಿಗೆ ಆಭಾರಿಯಾಗಿದ್ದೇವೆ. ರಾಜ್ಯದ ಬೇಡಿಕೆ ಅನಾವಶ್ಯಕವಾದದ್ದು. ಕೊಡಗಿನ ಹೆಸರನ್ನು ದೇಶದಲ್ಲಿಯೇ ಮೆರೆಯಿಸಿದ ಮಹಾನ್‌ವ್ಯಕ್ತಿಗಳಿದ್ದಾರೆ. ಅವರನ್ನು ಪ್ರತ್ಯೇಕಿಸಿ ಹೇಗೆತಾನೆ ಕಾಣಲು ಸಾಧ್ಯ. ನಾವು ಬೇರೆಯಾಗುತ್ತೇವೆಂದು ಅವರೇ ಹೇಳಿದರು ಸಹ ನಾವಂತು ಪ್ರತ್ಯೇಕವಾಗಲು ಬಿಡುವುದಿಲ್ಲವೆಂದು ಸಭೆಯನ್ನುದ್ದೇಶಿಸಿ ಕರತಾಡನಗಳ ಮಧ್ಯೆ ಮಾತನಾಡುತ್ತಿದ್ದರು.

## ಸಂಸ್ಕೃತಿ ಅಪಮೌಲ್ಯಕ್ಕೆ ಆತಂಕ – ಜೀವಿಜಯ

ಐದು ಸಾವಿರ ವರ್ಷಗಳ ಇತಿಹಾಸವಿರುವ ಗೌಡ ಜನಾಂಗ ಪ್ರಾಚೀನವಾದರೂ, ವಿಭಿನ್ನವಾದ ರೀತಿ–ನೀತಿಯ ಸಂಸ್ಕೃತಿ. ಇಂದು ಬೇರೆ ಬೇರೆಯಾಗಿರುವ ಗೌಡಜನಾಂಗದಲ್ಲಿ ಏಕತೆಯನ್ನು ಕಾಣುವ ಅವಶ್ಯಕತೆ ಹಾಗೂ ಕರ್ತವ್ಯವಾಗಿದೆ. ಇಂದು ವಿಭಿನ್ನತೆಯಲ್ಲಿ ಏಕತೆ ಕಾಣಬೇಕಾಗಿದೆ. ಬೇರೆಯವರನ್ನು ತುಲನೆಮಾಡಿ ನಮ್ಮದೇ ದೊಡ್ಡ ಸಮಾಜ, ನಮ್ಮದೇ ಮುಂದುವರಿದ ಸಂಸ್ಕೃತಿ ಎಂದು ಭಾವಿಸದೆ ಗೌಡ ಜನಾಂಗ ಒಂದೇ ವೇದಿಕೆಯಲ್ಲಿ ಸಾಗಬೇಕು. ನಾವು ಅರೆಭಾಷೆ ಗೌಡರು, ಒಕ್ಕಲಿಗೌಡರು ಹಾಗೂ ದಕ್ಷಿಣಕನ್ನಡದ ಗೌಡರೆಂದು ವಿಂಗಡಿಸಿದರೆ ನಮ್ಮ ಸಂಸ್ಕೃತಿಯನ್ನು ವಿಂಗಡಿಸಿದ ಹಾಗೆ. ನಮ್ಮ ವೈವಿಧ್ಯಮಯ ಪರಂಪರೆ ಸಂಸ್ಕೃತಿಗಳು, ಅಪಮೌಲ್ಯವಾಗುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿ, ನಮ್ಮ ಸಂಘಟನೆಯ ಕಾರ್ಯಕ್ರಮ ಸಂಘರ್ಷದ ಸ್ಥಿತಿ ಮುಟ್ಟಬಾರದೆಂದು ಸಮ್ಮೇಳನವನ್ನುದ್ದೇಶಿಸಿ ಮಾಜಿ ಮಂತ್ರಿ ಶ್ರೀಮಾನ್ ಬಿ.ಎ. ಜೀವಿಜಯ ಕರೆಯಿತ್ತರು.

## ನಾನು, ನನ್ನದು ಎಂಬುವುದು ಯಾರದ್ದು? –ಕೋಳಿಬೈಲು ಬೆಳ್ಯಪ್ಪ

ಅರೆಭಾಷೆ ಗೌಡ ಜನಾಂಗದ ಏಕೈಕ ಐ.ಎ.ಎಸ್. ಅಧಿಕಾರಿ, ಕರ್ನಾಟಕ ಹಣಕಾಸು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀಮಾನ್ ಕೋಳಿಬೈಲು ಬೆಳ್ಯಪ್ಪನವರು ಮಾತನಾಡಿ ನಾನು, ನನ್ನದು ಎಂಬುದರ ಬಗ್ಗೆ ಜನತೆಗೆ ತಿಳಿಹೇಳಿ, ನಾನು, ನನ್ನದೆಂಬುದು ಬರೀ ಆಸೆಯ ಮೂಲ, ಸತ್ತ ಮೇಲೆ ಯಾರದ್ದು ಅಲ್ಲ. ಆದ್ದರಿಂದ ಮನುಷ್ಯ ತನ್ನನ್ನು ಸಮಾಜಕ್ಕೆ ಸಮರ್ಪಿಸಿಕೊಳ್ಳಬೇಕು. ನಮ್ಮ ನಡೆ-ನುಡಿ, ರೀತಿ–ನೀತಿ, ಉಡುಗೆ–ತೊಡಿಗೆ ಇದೆಲ್ಲಾ ನಮ್ಮ ಸಂಸ್ಕೃತಿಯ ಪ್ರತೀಕ. ನಮ್ಮ ನಡೆ–ನುಡಿ, ಕೆಲಸ ಕಾರ್ಯಗಳು ನಮ್ಮ ಸಂಸ್ಕೃತಿಯನ್ನು ಎತ್ತಿ ತೋರಿಸುತ್ತದೆ. ನಮ್ಮ ಸಂಸ್ಕೃತಿ ನಮ್ಮ ಜೀವನಾಡಿ. ನಮ್ಮದು ಋಷಿ ಸಂಸ್ಕೃತಿ, ವಿದೇಶಿಯರು ನಮ್ಮ ಸಂಸ್ಕೃತಿಯನ್ನು ಅಧ್ಯಯನ ಮಾಡುತ್ತಿರುವಾಗ ನಾವು ನಮ್ಮಸಂಸ್ಕೃತಿಯನ್ನು ಮೂಲೆ

ಗುಂಪು ಮಾಡುವುದು ಸರಿಯಲ್ಲವೆಂದು ಶ್ಲೋಕಗಳ ಸುರಿಮಳೆಯ ಉದಾಹರಣೆಯೊಂದಿಗೆ ಗೌಡ ಜನಾಂಗಕ್ಕೆ ಉಪದೇಶಿಸಿದರು

**ಆರ್ಥಿಕವಾಗಿ, ಶೈಕ್ಷಣಿಕವಾಗಿ ಮುಂದುವರಿಯಬೇಕು - ದೊಡ್ಡಡ್ಕ ಬಾಲಕೃಷ್ಣ**

ಗೌಡರ ಸಂಘಟನೆ 13 ವರ್ಷಗಳ ಹಿಂದೆ ಸುಳ್ಯದಲ್ಲಿ ನಡೆದು ಆ ಸಂಘಟನೆಗೆ ಚಾಲನೆ ಸಿಗುವಷ್ಟರಲ್ಲಿ ಪುನಃ ಕುಂಠಿತವಾಯ್ತು. ಆ ರೀತಿಯ ಸಂಘಟನೆ ನಿಲ್ಲಬಾರದು. ಇಂತಹ ಕಾರ್ಯಕ್ರಮ ಹಮ್ಮಿಕೊಂಡದ್ದಕ್ಕೆ ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿಯವರನ್ನು ಅಭಿನಂದಿಸಬೇಕು. ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡರೆ ಬೇರೆಯವರ ವಿರುದ್ಧ ನಡೆಯುವ ಸಂಘಟನೆ ಎಂದು ಭಾವಿಸಬಾರದು. ನಾವೇ ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಮುಂದುವರೆದರೆ ನಮ್ಮ ಜನಾಂಗ ಮುಂದುವರಿದ ಹಾಗೆ, ಆಗ ನಮ್ಮ ಸಂಸ್ಕೃತಿ, ಆಚಾರ–ವಿಚಾರ, ಏಳಿಗೆಯನ್ನು ಕಾಣುತ್ತದೆ ಎಂದು ನುಡಿದರು.

**ಪತ್ರಿಕೆಯ ಧ್ಯೇಯೋದ್ದೇಶಗಳು - ಪಟ್ಟಡ ಪ್ರಭಾಕರ**

ಗೌಡ ಜನಾಂಗದ ಮುಖವಾಣಿ ಪತ್ರಿಕೆ, ಕಣ್ಮಣಿ, ಜೀವನಾಡಿ, ಜನ ಸಂಪರ್ಕ, ಮಾಧ್ಯಮ ಹಾಗೂ ಜನಾಂಗದ ಸಂಗಾತಿಯಾಗಿರುವ "ಕೊಡಗು ಸಂಗಾತಿ" ಪತ್ರಿಕೆಯ ಗೌರವ ಸಂಪಾದಕರಾದ ಶ್ರೀಮಾನ್ ಪಟ್ಟಡ ಪ್ರಭಾಕರರವರು ಈ ಬೃಹತ್ ಸಾಂಸ್ಕೃತಿಕ ಮೇಳನವನ್ನುದ್ದೇಶಿಸಿ ಮಾತನಾಡಿ, ಹತ್ತು ಕುಟುಂಬ, ಹದಿನೆಂಟು ಗೋತ್ರದ ಅಧ್ಯಯನದ ಬಗ್ಗೆ ನಿಗಾ ಇಡಬೇಕಾದದು ಅವಶ್ಯಕವೆಂದು ಯುವ ಪೀಳಿಗೆಗೆ ಕರೆಯಿತ್ತರು. ಪತ್ರಿಕೆ ಕೇವಲ ಅರೆಭಾಷೆ ಗೌಡರಿಗೆಂದರೆ ಸರಿಯಲ್ಲ, ಇದು ಇಡೀ ಗೌಡ ಸಮುದಾಯಕ್ಕೆ ಮೀಸಲಾಗಿರುವ ಪತ್ರಿಕೆ. ಇದು ಗೌಡ ಜನಾಂಗದ ಕೊಂಡಿ. ಕೆಲವೇ ಕ್ಷಣಗಳಲ್ಲಿ ಒಬ್ಬರನ್ನೊಬ್ಬರು ಸಂಪರ್ಕ ಪಡೆಯಬಹುದಾದ ಮಾಧ್ಯಮ. ಈ ಪತ್ರಿಕೆ ಜನಾಂಗದ ಸಂಘಟನೆಗೆ ಮೂಲಕಾರಣ. ಈ ಪತ್ರಿಕೆಯೇ ಈ ದಿನಗಳಲ್ಲಿ ಈ ರೀತಿಯ ಕಾರ್ಯಕ್ರಮ ಹಮ್ಮಿಕೊಳ್ಳಲು ಪ್ರೇರಣೆ ನೀಡಿದ ಎಂದೂ, ಆದ್ದರಿಂದ ಪ್ರತಿಯೊಬ್ಬರು ಕೊಡಗು ಸಂಗಾತಿಯ ಚಂದದಾರರಾಗಿ, ಪತ್ರಿಕೆಯು ಬೆಳೆಯುವ ನಿಟ್ಟಿನಲ್ಲಿ ಸಹಕರಿಸಬೇಕೆಂದು ಕಳಕಳಿಯ ಮನವಿ ಮಾಡಿಕೊಂಡರು.

**ಕಲಿತ ವಿದ್ಯೆಯನ್ನು ಕೃಷಿಗೆ ಅರ್ಪಿಸಿ : ಶಾಸಕ ದಂಬೆಕೋಡಿ ಮಾದಪ್ಪ**

ಕೊಡಗನ್ನು ಬಿಟ್ಟು, ಹೊರಗಡೆ ಹೋಗಿ ನೆಲೆಸಿ ಐಷಾರಾಮ ಜೀವನ ಸಾಗಿಸಲು ಒತ್ತು ನೀಡುತ್ತಿರುವ ನಮ್ಮ ಜನಾಂಗದ ಬಗ್ಗೆ ಕೆಂಡ ಕಾರಿದ ಶ್ರೀಯುತರು, ಈ ರೀತಿಯ ಜೀವನಕ್ಕೆ ಕಡಿವಾಣ ಹಾಕಬೇಕು. ಕೊಡಗಿನಲ್ಲಿ ಹುಟ್ಟಿ ಬೆಳೆದು ಕೊನೆಗೆ ತನ್ನ ಶ್ರಮವನ್ನು ಹೊರಗಡೆ ಹೋಗಿ ಅಲ್ಲಿ ವ್ಯಯ ಮಾಡಿದರೆ ಹೇಗೆ ? ಎಂದು ಪ್ರಶ್ನಿಸಿದರು. ನಮ್ಮ ಜನಾಂಗದಲ್ಲಿ ರಾವ್ ಬಹದ್ದೂರ್ ಬಿರುದುಗಳಿಲ್ಲ. ಕಾರಣ ನಮ್ಮ ಜನಾಂಗ ಬ್ರಿಟೀಷರ ವಿರುದ್ಧ ಹೋರಾಡಿ ಅವರ ಅವಕೃಪೆಗೆ ಪಾತ್ರರಾಗಿದ್ದಾರೆ. ಸೈನ್ಯದಲ್ಲಿ ಸೈನಿಕನಾಗಿ ಸೇವೆ ಸಲ್ಲಿಸಿದರೆ ಅದು ಜನರಲ್ ಆಗಿ ಸೇವೆ ಸಲ್ಲಿಸಿದ್ದಕ್ಕಿಂತಲೂ ಶ್ರೇಷ್ಠ ಎಂದ ಶ್ರೀಯುತರು, ನಮ್ಮ ಜನಾಂಗದಲ್ಲಿ ಯಾರು ಜನರಲ್‌ಗಳಿಲ್ಲವೆಂದು ತಿಳಿಯಬಾರದೆಂದರು. ಅವರು ಮುಂದುವರಿದು ನಮ್ಮ ಜನಾಂಗವನ್ನು ಕನ್ನಿಕೆ ನದಿಗೆ ಹೋಲಿಸಿ, ಕನ್ನಿಕೆಯು ಕಾವೇರಿಯ ಜೊತೆಯಲ್ಲಿ ಇಲ್ಲಿಂದ ಜೊತೆಗೂಡಿ ಹರಿದು ಸಮುದ್ರ ಸೇರಿದರೂ, ಎಲ್ಲಿಯೂ ತನ್ನತನದ ಪಾಲನ್ನು ಕೇಳಲಿಲ್ಲವೆಂದು, ಅಂದರೆ ಗೌಡರು ಕೊಡಗಿನ ಜನತೆಯೊಂದಿಗೆ ಬೆರೆತು ಸಾಗಿ ಅವರ ಅಭಿವೃದ್ಧಿಗೆ ಶ್ರಮಿಸಿ ಕೊನೆಗೆ ತನ್ನ ಪಾಲನ್ನು ಗೌಡ ಜನಾಂಗ ಕೇಳಬಾರದೆಂದು ಅರ್ಥೈಸಿ ಮಾತನಾಡಿ, ಗೌಡ ಜನಾಂಗದ ಯುವಕರು ವಿದ್ಯೆ ಕಲಿತು, ಕಲಿತ ವಿದ್ಯೆಯನ್ನು ಕೃಷಿಗೆ ಅರ್ಪಿಸಿದಾಗ ನಮ್ಮ ಜನಾಂಗ ಕೈಗೊಂಡಿರುವ ರೈತಾಪಿ ಕೆಲಸಕ್ಕೆ ಯಶಸ್ಸು ಸಿಗುತ್ತದೆಂದು, ಇದನ್ನು ಒಂದು ಸವಾಲಾಗಿ ಸ್ವೀಕರಿಸಬೇಕೆಂದು ಸಮ್ಮೇಳನದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಸಮ್ಮೇಳನದ ವೀರ ಕೇಸರಿ ಗುಡ್ಡೆಮನೆ ಅಪ್ಪಯ್ಯಗೌಡರ ವೇದಿಕೆಯಲ್ಲಿ ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿಯ ಅಧ್ಯಕ್ಷರಾದ ತುಂತ್ತಜ್ಜಿ ಗಣೇಶ್‌ರವರು, ಸೋಮವಾರಪೇಟೆ ಒಕ್ಕಲಿಗರ ಸಮಾಜದ ಅಧ್ಯಕ್ಷ ಮುತ್ತಣ್ಣನವರು, ಭಾಗಮಂಡಲ ಗೌಡ ಸಮಾಜದ ಅಧ್ಯಕ್ಷ ಕುದುಪಜೆ ಭೈರಪ್ಪನವರು, ಕೊಡಗು ವಿದ್ಯಾ ಸಂಘದ ಅಧ್ಯಕ್ಷರಾದ ಕುಯ್ಯಮುಡಿ ಪೂರ್ಣಯ್ಯನವರು ಜಿಲ್ಲಾ ಪಂಚಾಯತ್ ಸದಸ್ಯ ಎಸ್.ಜಿ. ಮೇದಪ್ಪನವರು, ಜಿಲ್ಲಾ ಪಂಚಾಯತ್ ಉಪಾಧ್ಯಕ್ಷೆ ಶ್ರೀಮತಿ ಕಮಲ ಗಣಪತಿಯವರು ಮೂಡಗದ್ದೆ ದಾಮೋದರನವರು, ಕಾಟಕೇರಿ ಗೌಡ ಸಮಾಜದ ಅಧ್ಯಕ್ಷರಾದ ಅಚ್ಚಲ್ಪಾಡಿ ಬೋಜಪ್ಪನವರು, ಗೌಡ ಸಾಂಸ್ಕೃತಿಕ ಅಕಾಡೆಮಿ ಭಾಗಮಂಡಲ ಸಮಿತಿಯ ಕಾರ್ಯಾಧ್ಯಕ್ಷರಾದ ದೇವಂಗೋಡಿ ಹರೀಶ್‌ನವರು ಹಾಗೂ ಅರೆಭಾಷಿಕ ಸಾಂಸ್ಕೃತಿಕ ಸಮಿತಿ, ಮೈಸೂರು ಇದರ ಅಧ್ಯಕ್ಷರಾದ ತಡಿಯಪ್ಪನ ಕುಮಾರ ಜಯನವರು ವೇದಿಕೆಯ ಮೇಲೆ ಆಸೀನರಾಗಿದ್ದರು.

ಕಾರ್ಯಕ್ರಮವು ನಿಡ್ಯಮಲೆ ವಾಣಿ ವಾಸುದೇವರವರ ಪ್ರಾರ್ಥನೆಯೊಂದಿಗೆ ಪ್ರಾರಂಭಗೊಂಡು, ಸ್ವಾಗತ ಗೀತೆಯನ್ನು ಕುದುಕುಳಿ ಸೇವಂತಿ ಚಂದ್ರಶೇಖರ್ ಅರೆಭಾಷೆಯಲ್ಲಿ ನಮ್ಮ ಸಂಪ್ರದಾಯನ್ನೊಳಗೊಂಡ ಪ್ರತಿಯೊಂದು ಸನ್ನಿವೇಷಗಳನ್ನು ಗೀತೆ ರೂಪದಲ್ಲಿ ಹಾಡಿ ನೆರೆದಿದ್ದ ಗೌಡ ಜನಾಂಗದವರ ಮೆಚ್ಚಿ

ಗೆಗೆ ಪಾತ್ರರಾದರು. ಕುಂದಲ್ಪಾಡಿ ದಿವಾಕರ್‌ರವರು ಸ್ವಾಗತ ಭಾಷಣ ಮಾಡಿದರೆ, ದೇವಂಗೋಡಿ ಹರೀಶ್ ಪ್ರಾಸ್ತಾವಿಕ ಭಾಷಣ ಮಾಡಿದರಲ್ಲದೆ ಕುದುಕುಳಿ ಭರತ್‌ರವರು ವಂದಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಕುಂದಲ್ಪಾಡಿ ದಿವಾಕರ್ ಮತ್ತು ಪಟ್ಟಡ ಶಿವಕುಮಾರ್ ನಿರ್ವಹಿಸಿದರು.

**ಭಾಗಮಂಡಲವನ್ನೇ ತನ್ನದಾಗಿ ಆವರಿಸಿದ ಅದ್ದೂರಿ ಮೆರವಣಿಗೆ, ಮೆರೆದ ಗೌಡ ಸಂಪ್ರದಾಯ! ಸಂಘಟಕರಿಗೆ ತಂದ ಆಶ್ಚರ್ಯ :**

ಭಾಗಮಂಡಲ ಭಗಂಡೇಶ್ವರ ಸನ್ನಿಧಿ ಕೇವಲ ತುಲಾ ಸಂಕ್ರಮಣ ಮತ್ತು ಶಿವರಾತ್ರಿಯ ಸಂದರ್ಭದಲ್ಲಿ ಜನ ಜಮಾಯಿಸಿದ್ದನ್ನು ಬಿಟ್ಟರೆ ಬೇರೆ ಯಾವ ಸಂದರ್ಭದಲ್ಲಿಯೂ ಜನಸೇರಬೇಕೆಂದರೆ ಅದು ಬಹಳ ಕಷ್ಟಕರ ಕೆಲಸವಾಗುತಿತ್ತು. 1998 ಮೇ 1ನೇ ತಾರೀಖು ಕೊಡಗಿನ ಗೌಡ ಜನಾಂಗದ ಚರಿತ್ರೆಯಲ್ಲಿಯೇ ಬರೆದಿಡತಕ್ಕಂತಹ ವಿಷಯ. ಭಾರಿ ಸಂಖ್ಯೆಯಲ್ಲಿ ಸೇರಿದ್ದ ಈ ಜನಸ್ತೋಮ ಪ್ರಾರಂಭದಲ್ಲಿ ಭಾಗಮಂಡಲದ ಗೌಡ ಸಮಾಜದಿಂದ ಮೆರವಣಿಗೆಯನ್ನು ಏರ್ಪಡಿಸಲಾಗಿತ್ತು. ಭಾಗಮಂಡಲಕ್ಕೆ ಕೊಡಗಿನ ಮೂಲೆ ಮೂಲೆಗಳಿಂದ ಕೆಲಸ ಕಾರ್ಯಗಳನ್ನು ಲೆಕ್ಕಿಸದೆ ಜನರು ಬಂದು ಜಮಾಯಿಸುತ್ತಿದ್ದರು. ಈ ರೀತಿಯ ಜನರ ಸೇರ್ಪಡೆಯು ಸಂಘಟಕರಿಗೆ ಆಶ್ಚರ್ಯವಾಗಿತ್ತಲ್ಲದೆ ತಮ್ಮ ಹುರುಪನ್ನು ಇಮ್ಮಡಿಗೊಳಿಸಿತ್ತು. ನಿರೀಕ್ಷೆಗೂ ಮೀರಿದ್ದ ಈ ಜನಸ್ತೋಮ ಒಂದು ಹೋಬಳಿ ಮಟ್ಟದ್ದಾಗಿತ್ತೆಂದೂ ಸಂಘಟಕರು ವಿವರಿಸಿದ್ದಲ್ಲದೆ ಸುಮಾರು 7000 ಜನ ಸೇರಿದುದು ಇತಿಹಾಸವಾಗಿದೆ.

ಮೊದಲಿಗೆ ಮರವಣಿಗೆಯು ಗೌಡ ಸಮಾಜದಿಂದ ಸುಮಾರು 10 ಗಂಟೆಗೆ ಹೊರಟು ಭಗಂಡೇಶ್ವರನ ಸನ್ನಿಧಿಯ ಮುಂಭಾಗದಿಂದ ಸಾಗಿ, ಭಾಗಮಂಡಲದ ಪ್ರಾಥಮಿಕ ಶಾಲೆಯ ಪಕ್ಕದಿಂದ ತಿರುಗಿ, ಅದೇ ದಾರಿಯಲ್ಲಿ ವಾಪಾಸ್ಸು ತ್ರಿವೇಣಿ ಸಂಗಮದ ಸನ್ನಿಧಿಯಲ್ಲಿ ಏರ್ಪಾಡಾಗಿದ್ದ ವೀರಕೇಸರಿ ಗುಡ್ಡೆಮನೆ ಅಪ್ಪಯ್ಯ ಗೌಡರ ವೇದಿಕೆಯನ್ನು, ಗೌಡಕೇಸರಿ ನಿಡ್ಯಮಲೆ ಮುದ್ದಪ್ಪನವರ ಮಹಾದ್ವಾರದ ಮೂಲಕ ಸಾಗಿ ಸೇರಿಕೊಂಡಿತು ಈಡುಗಾಯಿ ಒಡೆಯುವುದರೊಂದಿಗೆ ಮೊಟ್ಟನ ದೇವಯ್ಯನವರು ಮೆರವಣಿಗೆಯನ್ನು ಉದ್ಘಾಟಿಸಿದರು. ಮೆರವಣಿಗೆಯ ಇಕ್ಕೆಡೆಗಳಲ್ಲಿ ಗೌಡ ಸಂಪ್ರದಾಯದ ಸೀರೆಯುಟ್ಟ ಮಕ್ಕಳು ಹಾಗೂ ವನಿತೆಯರು ಪೂರ್ಣಕುಂಭದೊಂದಿಗೆ ಸಾಗುತ್ತಿದ್ದರೆ, ಜೊತೆಯಲ್ಲಿಯೇ ಗೌಡ ಸಂಪ್ರದಾಯದ ವೀರರ ಉಡುಗೆಯಾದ ಕುಪ್ಪಸದಟ್ಟಿ ಮತ್ತು ಪೇಟತೊಟ್ಟು ಗಾಂಭೀರ್ಯದಿಂದ ಹೆಜ್ಜೆ ಇಡುತ್ತಿದ್ದರು. ಹಿಂದಿನಿಂದ ಮೆರವಣಿಗೆಯಲ್ಲಿ ಭಾಗಮಂಡಲ ಸಾಂಸ್ಕೃತಿಕ ಸಮಿತಿಯಿಂದ ಕಾವೇರಿಮಾತೆಯ ಸ್ತಬ್ದಚಿತ್ರ, ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ ವತಿಯಿಂದ ವೀರಕೇಸರಿ ಅಪ್ಪಯ್ಯ ಗೌಡರ ಸ್ತಬ್ಧ ಚಿತ್ರವು, ಗೌಡಕೇಸರಿ ನಿಡ್ಯಮಲೆ ಮುದ್ದಪ್ಪನವರ ಸ್ತಬ್ಧಚಿತ್ರವು ಜೊತೆಗೆ ಸಂಪಾಜೆಯ ಜೈ ಭಾರತ್ ಯುವಕರ ಸಂಘದ ವತಿಯಿಂದ ಸಿದ್ಧವೇಷ ಕುಣಿತವು ಸೋಮವಾರಪೇಟೆಯ ಒಕ್ಕಲಿಗರ ಸಂಘದ ವತಿಯಿಂದ ಸುಗ್ಗಿ ಕುಣಿತಗಳೊಂದಿಗೆ ಕೊಡಗಿನ ಬೇರೆ ಬೇರೆ ಕಡೆಗಳಿಂದ ಬಂದ ಇನ್ನು ಹಲವು ಕಾರ್ಯಕ್ರಮಗಳು ಮೆರವಣಿಗೆಯನ್ನು ಯಶಸ್ಸುಗೊಳಿಸಿತು.

**ವೀರಕೇಸರಿ ಗುಡ್ಡೆಮನೆ ಅಪ್ಪಯ್ಯ ಗೌಡರ ವೇದಿಕೆ - ಜನರನ್ನು ರಂಜಿಸಿದ ಸಾಂಸ್ಕೃತಿಕ ಕಾರ್ಯಕ್ರಮ :**

ಕೊಡಗಿನ ಗೌಡ ಸಂಪ್ರದಾಯಗಳನ್ನು ಬಿಂಬಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳು ಮಧ್ಯಾಹ್ನ 2ಗಂಟೆಗೆ ವೀರಕೇಸರಿ ಅಪ್ಪಯ್ಯ ಗೌಡ ವೇದಿಕೆಯಲ್ಲಿ ಪ್ರಾರಂಭಿಸಿದ್ದಲ್ಲದೆ, ಇದರಲ್ಲಿ ಕೊಡಗಿನ ಮೂಲೆ ಮೂಲೆಗಳಿಂದಲೂ, ಮೈಸೂರು ಬೆಂಗಳೂರಿನಿಂದ ಬಂದ ತಂಡಗಳು ಭಾಗವಹಿಸಿದ್ದವು.

ವೇದಿಕೆಯಲ್ಲಿ ಕಾರ್ಯಕ್ರಮವು ಭಾಗಮಂಡಲದ ಮಿಲನ್ ತಂಡದಿಂದ ರಂಗಪೂಜೆಯ ಸ್ವಾಗತ ನೃತ್ಯದೊಂದಿಗೆ ಪ್ರಾರಂಭಿಸಿದಲ್ಲದೆ, ಮಡಿಕೇರಿ ಮಹಿಳಾ ಒಕ್ಕೂಟದವರಿಂದ ಶತಮಾನಕ್ಕೂ ಹಿಂದೆ ಹಾಡುತ್ತಿದ್ದ ಹರಿಸೇವೆ ಹಾಡು, ಸೋಮವಾರಪೇಟೆಯ ತಂಡದಿಂದ ಸುಗ್ಗಿಕುಣಿತ, ಐಕೊಳ ತಂಡದಿಂದ ಕೋಲಾಟ, ಕುಂಬಳದಾಳು ರಾಧಕುಮಾರಿ ತಂಡದಿಂದ ಹಾಸ್ಯ ಅರೆಭಾಷೆಯ ಹಾಡು, ಸೋಮವಾರಪೇಟೆ ತಂಡದಿಂದ ಕೊಂಬುಕುಣಿತ, ಯಶೋಧ ದೇವಕ್ಕಿ ತಂಡದಿಂದ ಸುಗ್ಗಿಸೀರೆ, ರಂಗಸಮುದ್ರ ತಂಡದಿಂದ ಕೋಲಾಟ, ಯಶೋಧ ಉಲ್ಲಾಸ ಬೆಟ್ಟಗೇರಿ ತಂಡದಿಂದ ಕಿರುನಾಟಕ, ಲತಾ ತಂಡದಿಂದ ಅಂಬಲೆಲೆ, ಚೇರಂಬಾಣೆ ತಂಡದಿಂದ ಗೂಡೆ ನೋಡಿಕೆ ಹೋದು, ಐಕೊಳ ತಂಡದಿಂದ ಗಂಗೆಪೂಜೆ, ಜಯಶ್ರೀ ಮದೆನಾಡು ಇವರಿಂದ ಭರತನಾಟ್ಯ, ಮೂಡಲ್ ಕುಣಿಗಲ್ ನೃತ್ಯ ತಡಿಯಪ್ಪನ ಭವ್ಯ ಮತ್ತು ಮೊಟ್ಟನ ನಮಿತರವರಿಂದ, ತಾಕೇರಿ ತಂಡ ಕೋಲಾಟ, ಮಜ್ಞಾಪುರ ಮಿಲನ್ ತಂಡ ಮಡಿಕೇರಿ ಇವರಿಂದ ಭರತನಾಟ್ಯ, ಸಿದ್ಧಾಪುರ ತಂಡದಿಂದ ಕೃಷ್ಣನನೃತ್ಯ, ಮಿಲನ್ ತಂಡ ಭಾಗಮಂಡಲದಿಂದ ಜಾನಪದನೃತ್ಯ, ಅಮ್ಮಾಜೀರ ಪೊನ್ನಪ್ಪ ಬೆಂಗಳೂರು ತಂಡದಿಂದ ಕಾವೇರಿನೃತ್ಯ, ತೆಕ್ಕಡೆ ಕುಮಾರ್ ಮುತ್ತಾಮುರ್ಡಿ ಇವರಿಂದ ಭೂತಕೋಲ, ಗಾನಶೃತಿ ಮಡಿಕೇರಿ ಯುವರಿಂದ ಭರತನಾಟ್ಯ, ನೈಯ್ಯಣಿ ಹೇಮಲತಾ ತಂಡ ಬೆಟ್ಟಗೇರಿ ಇವರಿಂದ ಕೃಷ್ಣನ ಕೋಲಾಟ, ಕಡ್ಲೇರ ಅಂಕಿತ ಮಡಿಕೇರಿ ಇವರಿಂದ ಕೊರವಂಜಿ ನೃತ್ಯ, ಬಾಕಿಲನಮೈನಾ ಪೂಣಚ್ಚ ಇವ

11ನೇ ಪುಟನೋಡಿ

## ಕೈಯ ಮುಗಿ ನೂಲು ತೆಗೆ

ಕೈಯ ಮುಗಿ ನೂಲು ತೆಗೆ ನಮ್ಮ ಗಾಂಧಿಗೆ
ನಮ್ಮ ತಾತ ನಮ್ಮ ಬಾಪು ನಮ್ಮ ಗಾಂಧಿಯು ।
ಲೋಕಪೂಜ್ಯ ಮಹಾಪುರುಷ ನಮ್ಮ ಗಾಂಧಿಯು
ಬಡವರೊಡೆಯ ಬಡವರುಸಿರು ನಮ್ಮ ಗಾಂಧಿಯು ॥ಕೈ॥

ಖಾದಿಬಟ್ಟೆ ಕಂಡು ಹಿಡಿದ ನಮ್ಮ ಗಾಂಧಿಯು
ಖಾದಿ ಭಾಗ್ಯ ತೋರಿ ತಂದ ನಮ್ಮ ಗಾಂಧಿಯು ।
ಶಾಂತಿ ಸಮರಕ್ಕಾಗಿ ದುಡಿದ ನಮ್ಮ ಗಾಂಧಿಯು
ದಿಟ್ಟತನದಿ ಪಟ್ಟು ಹಿಡಿದ ನಮ್ಮ ಗಾಂಧಿಯು ॥ಕೈ॥

ಚರಕದಿಂದ ನಮ್ಮ ಮುಕ್ತಿ ಎಂದ ಗಾಂಧಿಯು
ಚರಕ ಕಾಮಧೇನುವೆಂಬ ಪೂಜ್ಯ ಗಾಂಧಿಯು ।
ಚರಕ ಅಣ್ಣ ತಮ್ಮ ತರಲಿ ನಾಡ ಮಕ್ಕಳೆ
ಚರಕ ತರಲಿ ನಮ್ಮ ಅಸ್ತ್ರ ಫುಟ್ಟ ಮಕ್ಕಳೆ ॥ಕೈ॥

ತುಂಡು ಬಟ್ಟೆ ಉಟ್ಟು ನಲಿದ ನಮ್ಮ ಗಾಂಧಿಯು
ಚೂರು ರೊಟ್ಟಿ ತಿಂದು ಬೆಳೆದ ನಮ್ಮ ಗಾಂಧಿಯು ।
ಬಡವನಂತೆ ಗುಡಿಸಲಲ್ಲಿ ವಾಸಮಾಡುವ
ಧೀನನಂತೆ ಚಾಪೆ ಮೇಲೆ ನಿದ್ರೆ ಮಾಡುವ ॥ಕೈ॥

○ **ಕೊಡಕಂಡಿ ಪೂವಮ್ಮ ಅಪ್ಪಾಜಿ**

(10ನೇ ಪುಟದಿಂದ)

ರಿಂದ ಕೋಲಾಟ, ಶೃತಿ ಹರೀಶ್ ತಣ್ಣಿಮಾನಿ ಇವರಿಂದ ಮಿಮಿಕ್ರಿ, ಕರಿಕೆಯ ತಂಡದಿಂದ ಹರಕೆಯ ಕೋಲ, ನೂತನ್ ಕುಮಾರ್ ಇವರಿಂದ ಅರೆಭಾಷೆಯ ಹಾಡು, ಗಾಳಿಬೀಡಿನ ಪೂಜಾ ಸೋಮಯ್ಯನವರಿಂದ ಜಾನಪದ ನೃತ್ಯ, ಸಿದ್ದಾಪುರ ತಂಡದಿಂದ ಕಾವೇರಿ ಹಾಡು, ಕುಂಬಳದಾಳು ಮತ್ತು ಚೇರಂಗಾಲ ತಂಡದಿಂದ ಶೋಬಾನೆ, ಮಡಿಕೇರಿ ತಂಡದಿಂದ ಅರೆಭಾಷೆ ಹಾಡು ಭಾಗಮಂಡಲ ಮಿಲನ್ ತಂಡದಿಂದ ಕೋಲಾಟ, ಬೆಟ್ಟಗೇರಿ ತಂಡದಿಂದ ಶೋಬಾನೆ ಹಾಡು ನೈಯ್ಯಣಿ ತಾರಗೋಪಾಲರವರಿಂದ ಹುಟ್ಟಿದರೆ ಕನ್ನಡನಾಡಲ್ಲಿ ಹುಟ್ಟಬೇಕು ನೃತ್ಯ, ಅಲ್ಲದೇ ಕೊಡಗಿನ ವಾಲಗದ ನೃತ್ಯದೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಮಂಗಳ ಹಾಡಲಾಯಿತು.

ಕೊನೆಗೆ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಕಲಾ ತಂಡಗಳಿಗೆ ಮಡಿಕೇರಿಯ ಪೋಲಿಸ್ ಡಿ. ವೈ. ಎಸ್. ಪಿ. ಯವರಾದ ಯಾಲದಾಳು ಕೇಶವನಂದರವರು ನೆನಪಿನ ಕಾಣಿಕೆಗಳನ್ನು ವಿತರಿಸಿದರು.

**-ವರದಿ**

## ಗೌಡರ ವಿವಾಹ ಪದ್ಧತಿಯ ಶೋಭಾನೆಗಳು

**ಎಣ್ಣೆ ಅರಿಸಿನ ಮಾಡುವಾಗ ಹೇಳುವ ಹಾಡು :-**

ಎಣ್ಣೆಯನೊತ್ತಿದರು ಮೀನಾಕ್ಷಿಗೆ ಎಣ್ಣೆಯನೊತ್ತಿದರು ॥
ಸುಗುಣ ಸಂಪೂರ್ಣೆಗೆ ನಿಗಮದ ವಿನೂತೆಗೆ ।
ಜಾಜಿಯ ಹೂವಿನ ಎಣ್ಣೆ ಅರಸಿನ ಒತ್ತಿದರು।
ಮೀನಾಕ್ಷಿಗೆ ಎಣ್ಣೆಯನೊತ್ತಿದರು॥
ಸುರವರನ ಪಾಲೆಗೆ ಗಿರಿರಾಜ ಬಾಲೆಗೆ ।
ತಿರುವಂತಿನ ಹೂವಿನ ಎಣ್ಣೆ ಅರಸಿಣ ಒತ್ತಿದರು ।
ಮೀನಾಕ್ಷಿಗೆ ಎಣ್ಣೆಯನೊತ್ತಿದರು॥
ಕರಪೂರಲೋಲನ ಶಂಕರನ ಪತ್ನಿಗೆ।
ತಿರುವಂತಿನ ಹೂವಿನ ಎಣ್ಣೆ ಅರಸಿಣ ಒತ್ತಿದರು।
ಮೀನಾಕ್ಷಿಗೆ ಎಣ್ಣೆಯನೊತ್ತಿದರು॥
ಸ್ವಾಮಿ ಮಾವ ಕಂಶನ ಕೊಂದಿರೆ।
ಮಂಗಳಾರತಿ ತಂದು ಬೆಳಗಿರೆ ರಂಗನಾಥನ ಪ್ರಿಯೆಗೆ।
ಸ್ವಾಮಿ ರಂಗನಾಥನ ಪ್ರಿಯೆಗೆ॥
ಬಿಲ್ಲ ಹಬ್ಬಕೆ ಅಲ್ಲಿ ಪೋಗಿ ಮಾವ ಕಂಸನ ಕೊಂದಿರೆ ।
ಮಂಗಳಾರತಿ ತಂದು ಬೆಳಗಿರೆ ರಂಗನಾಥನ ಪ್ರಿಯೆಗೆ ।
ಸ್ವಾಮಿ ರಂಗನಾಥನ ಪ್ರಿಯೆಗೆ॥
ಹಾಸು ಮಂಚವ ಲೇಸು ತಲೆದಿಂಬು ಅಕ್ಕಿ ಹಾಸಿಗೆ ಹಾಸಲೆ।
ಮಂಗಳಾರತಿ ತಂದು ಬೆಳಗಿರೆ ರಂಗನಾಥನ ಪ್ರಿಯೆಗೆ ।
ಸ್ವಾಮಿ ರಂಗನಾಥನ ಪ್ರಿಯೆಗೆ॥

○ ● ○

ನೀಲಬಲಾಂಗತ ನೀಲನೇ ಜೌಂಗತ ಪಾಲನ ಶೀಲಾಗೋಪಾಲ ದುರುಳತನದಿ ಪಾಲ್ ಮೊಸರನು ಕುಡಿಸುತ ಕರದಿಂದಲಿ ಅರಸಿಣ ಕರೆಗೂಡಿ ॥ನೀಲ॥ ಶೀಲವ ಪಾಲ ಗೋಪಾಲ ಮಗಳ ಗುಂಡಿಸಲರುಚಿ ನಿಗಿಲವು ವಿಚಿತ್ರ ಮಗಲತ ಪೂಸುವ ಚೌವಳವ ಪಾಲವ ಶೀಲಗೋಪಾಲ ಅರಸಿಣ ಹಚ್ಚುವ ನೆರೆನೋಡಿ ॥ನೀಲ॥ ಚಿಣ್ಣಿ ಕೋಲ ಚೆಂಡು ಬಣ್ಣದ ಬುಗುರಿಯ ಮನ್ನಣೆ ಕಳಗನೊಳ್ ಬೆಣ್ಣೆ ತಿಂದ ಕೈಗೆ ಅರಸಿಣ ಹಚ್ಚುವೆ ನೆರೆನೋಡಿ ॥ನೀ॥ ಪಾಲನ ಶೀಲಾ ಗೋಪಾಲ ಮಳೆಗಾಲದ ನೀಗದಿ ಲೇಸವು ಜಾಲಗಿರಿ ತಾಟವಿದವು ಕಾಲಿಗೆ ಪೂಸುವೆವು ಅರಸಿಣವ ॥ನೀಲ॥ ಪಾಲನ ಶೀಲಾ ಗೋಪಾಲ॥

[ಮುಂದುವರಿಯುವುದು]

# ಮೆದುಳಿಗೆ ವ್ಯಾಯಾಮ

ಮಾರ್ಚ್ ಬಂತೆಂದರೆ ಸಾಕು ಶುರುವಾಗುತ್ತದೆ ವಿಪರೀತ ಸೆಖೆ. ಬೆವರಿಳಿಸುವ ಸೆಖೆಯ ಜೊತೆಗೆ ಮಕ್ಕಳನ್ನು ಬೆದರಿಸುವ ಪರೀಕ್ಷೆ' ಎಂಬ ಭೂತದ ಆಗಮನ ಕೂಡ ಇದೇ ಸಮಯದಲ್ಲಿ. ಪರೀಕ್ಷೆ ಸಮೀಪಿಸಿದಾಗ, ತಂದೆ ತಾಯಿಯಂದಿರು ಹಾಗೂ ಉಪಾಧ್ಯಾಯರು ಮಕ್ಕಳ ಮೇಲೆ ಹೊರಡಿಸುವ ಮಾನಸಿಕ ಒತ್ತಡದಿಂದಾಗಿ ಮಕ್ಕಳು ತತ್ತರಿಸಿ ಹೋಗಿ ಸಹಸ್ರಾರು ಮಂದಿ ಮುಗ್ಧ ಎಳೆಯರು ಮಾನಸಿಕವಾಗಿ ಅಸ್ವಸ್ಥರಾಗಿರುವುದು ಬಹಳ ಶೋಚನೀಯ ಸಂಗತಿ. ಕಳೆದ ವರ್ಷ ಬೆಂಗಳೂರು ನಗರದಲ್ಲಿ 8 ವರ್ಷದ ಪುಟಾಣಿಯೊಂದು ಫೇಲಾಗಿ ಮನೆಗೆ ಹೋದರೆ ತಂದೆ ಹೊಡೆಯುತ್ತಾರೆಂದು ಹೆದರಿ ತನ್ನ ಪುಟ್ಟ ಸೈಕಲ್ಲನ್ನು ರೋಡಿನ ಬದಿಯಲ್ಲಿರಿಸಿ ಕೆರೆಗೆ ಹಾರಿ ಪ್ರಾಣ ತೆತ್ತ ಘಟನೆ ನಡೆಯಿತು.

ನಮ್ಮ ನೆಂಟರೊಬ್ಬರ 6ವರ್ಷದ ಮಗು ಮಧ್ಯರಾತ್ರಿ ತಟ್ಟನೆ ಎದ್ದು ಬಿಕ್ಕಳಿಸಿ ಅಳಲಾರಂಭಿಸಿದಾಗ ಕಳವಳಗೊಂಡ ಅವರ ತಂದೆ ತಾಯಿ ಅದನ್ನು ಸಂತೈಸಿ ಸಮಾಧಾನ ಮಾಡಿದ ಬಳಿಕ ತಿಳಿಯಿತಂತೆ, ಮರುದಿನ ಹೋಂವರ್ಕ್ ಮಾಡದೆ ಹೋದರೆ ಟೀಚರ್ ಹೊಡೆಯುತ್ತಾರೆ ಎಂದು ಭಯಭೀತಳಾದ ಆ ಮಗು ಅಳಲು ಶುರುಮಾಡಿತ್ತು ಎಂದು. "Education is not the amount of information that is put into your brain and remains there undigested, all your life" ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ.

ವಿದ್ಯೆ ಮಾನವನಿಗೆ ಬಹಳ ಅಗತ್ಯ, ನಿಜ. ಆದರೆ ಇತ್ತೀಚೆಗೆ 'ವಿದ್ಯೆ' ಮುಂದಿನ ಸುಖ ಜೀವನಕ್ಕೆ ಹಣ ಗಳಿಕೆಯ ಸಾಧನೆಯಾಗಿರುವುದು ವಿಷಾದಕರ ವಿಷಯ.

ಎಲ್ಲಾ ಮಕ್ಕಳ ಮಾನಸಿಕ ಸಮತೋಲನೆ ಒಂದೇ ರೀತಿ ಇರುವುದಿಲ್ಲ. ಕೆಲವರ ಮನಸ್ಸು ಕಠಿಣವಾಗಿರುತ್ತದೆ, ಕೆಲವು ಮಕ್ಕಳು ಬಹಳ ಮೃದು ಸ್ವಭಾವದವರಾಗಿರುತ್ತಾರೆ. ಅವರು ಬೆಳೆದು ಬರುವ ವಾತಾವರಣವೂ ಈ ವ್ಯತ್ಯಾಸಕ್ಕೆ ಒಂದು ಮುಖ್ಯ ಕಾರಣ. ಕೆಲವು ಉಪಾಧ್ಯಾಯರು ಮಕ್ಕಳಲ್ಲಿ ಉತ್ಸಾಹ ತುಂಬುವ ಬದಲಾಗಿ ಅವರ ಮೇಲೆ ದ್ವೇಷ ಸಾಧಿಸುವಂತೆ ನಡೆದುಕೊಳ್ಳುತ್ತಾರೆ. ಇದು ನನ್ನ ಸ್ವಂತ ಅನುಭವ. "ಕೊನೆಗೂ ಪರೀಕ್ಷೆ ಬಂತಲ್ಲಾ, ಈ ಸಲ ನೀವೆಲ್ಲ ಅದ್ಹೇಗೆ ಪಾಸಾಗ್ತೀರೋ, ನಾನೂ ನೋಡ್ತೀನಿ" ಎಂದು ಸವಾಲು ಹಾಕುವವರು ಒಬ್ಬರಾದರೆ, "ಗಲಾಟೆ ಮಾಡಿದ್ರೆ ತಪ್ಪು ತಪ್ಪು ಉತ್ತರ ಬರಿಸ್ಬಿಡ್ತೀನಿ" ಅಂತ ಹೆದರಿಸುವವರು ಇನ್ನೊಬ್ಬರು. ಇವೆರಡು ನಾನು Middle ಸ್ಕೂಲ್‌ನಲ್ಲಿದ್ದಾಗ ನಡೆದ ಘಟನೆಗಳು. ಇಂತಹ ಘಟನೆಗಳಿಂದ ಮುಗ್ಧ ಮಕ್ಕಳಲ್ಲಿ ಓದುವ ಕಾಳಜಿ ಕಡಿಮೆಯಾಗಿ ಅವರು ನಿರುತ್ಸಾಹಿಗಳಾಗುತ್ತಾರೆ. ನಮ್ಮ ಕಾಲೇಜಿನ ಒಬ್ಬರು ಅಧ್ಯಾಪಕರು "ನೀವೆಲ್ಲ ಡಿಗ್ರಿ ಮಾಡೋ ಹುಟ್ಟನ್ನ ನಾನು ನೋಡಿಲ್ವಾ... ನಿಮ್ಗೆಲ್ಲಾ ಮದ್ವೆಯಾಗಿ ಮಕ್ಳಾದ್ರೂನೂ ಡಿಗ್ರಿ Supplementary ಬರೀತಾ ಇರ್ತೀರ" ಎಂದು ವ್ಯಂಗ್ಯವಾಗಿ ಹೇಳುತ್ತಿದ್ದರು. ಈ ರೀತಿಯ ಬಿರುನುಡಿಗಳಿಂದ ವಿದ್ಯಾರ್ಥಿಗಳ ಮನಸ್ಸಿನಲ್ಲಿ ದುಃಖವಷ್ಟೇ ಅಲ್ಲ, ತಮ್ಮ ಅಸಹಾಯಕತೆಯನ್ನು ಹಿಯಾಳಿಸುವ ಗುರುಗಳ ಮೇಲಿನ ಭಕ್ತಿ ಕ್ಷೀಣಿಸುತ್ತದೆ.

ನಮ್ಮಲ್ಲಿ ಎಷ್ಟೋ ಜನ ಬುದ್ಧಿವಂತರಿದ್ದರೂ, ಪರೀಕ್ಷೆಯ ಸಮಯದಲ್ಲಿ ಹೇಗೆ ಓದಬೇಕೆಂಬ ಸರಿಯಾದ ಕ್ರಮವನ್ನು ತಿಳಿಯದೇ ಫೇಲಾಗುತ್ತಾರೆ. ನಮ್ಮ ತಿಳುವಳಿಕೆಯನ್ನು ಅಂಕಗಳಿಂದ ಅಳೆಯಲು ನಮ್ಮ ಅಧ್ಯಾಪಕರುಗಳಿಗೆ ತಿಳಿದಿರುವ ಒಂದೇ ವಿಧಾನ 'ಲಿಖಿತ ಪರೀಕ್ಷೆ'. ಈ ವ್ಯವಸ್ಥೆಯನ್ನು ಬದಲಾಯಿಸುವುದು ಕಷ್ಟಸಾಧ್ಯ. ಆದ್ದರಿಂದ ನಾವು ಈ ಕೆಳಗಿನ 8* ಅಂಶವನ್ನು ಗಮನದಲ್ಲಿಟ್ಟುಕೊಂಡು ಅದರಂತೆಯೇ ನಡೆದರೆ ಎಂತಾ ಕಷ್ಟದ ಪರೀಕ್ಷೆಯಲ್ಲೂ ತೇರ್ಗಡೆಯಾಗಬಹುದು.

- ಯುದ್ಧಕಾಲದಲ್ಲಿ ಶಸ್ತ್ರಾಭ್ಯಾಸ ಬೇಡ! ಮೊಟ್ಟ ಮೊದಲ ದಿನದಿಂದ ಕೊಂಚ ಕೊಂಚವಾಗಿ ಅಭ್ಯಸಿಸುತ್ತಾ ಬಂದರೆ ಪರೀಕ್ಷೆ ಸಮಯದಲ್ಲಿ ಅತಿಯಾದ ಶ್ರಮದ ಅಗತ್ಯವಿರುವುದಿಲ್ಲ.
- ನೀವು ಏನೇ ಓದಿದರೂ, ಅದನ್ನು ಅರ್ಥ ಮಾಡಿಕೊಂಡು ಓದಿರಿ. ಇಲ್ಲದಿದ್ದರೆ ಅದನ್ನು ನೀವು ಸುಲಭವಾಗಿ ಮರೆಯುವಿರಿ.
- ಮೊದಲ ಬಾರಿ ಓದಿದಾಗ 60% ಅರ್ಥವಾಗುವ ಪಾಠ, 48 ಗಂಟೆಗಳ ನಂತರ 2ನೇ ಬಾರಿ ಓದಿದಾಗ 75% ಅರ್ಥವಾಗುವುದು. ಮತ್ತೆ 2 ಬಾರಿ ಓದಿದರೆ 100% ಜ್ಞಾಪಕದಲ್ಲಿರುವುದು ಬೇಕಾದರೆ ಪರೀಕ್ಷಿಸಿ.
- ಅನೇಕ ವಿದ್ಯಾರ್ಥಿಗಳಿಗೆ ಓದಿದನ್ನು ಬರೆಯಲು ಸಾಧ್ಯವಾಗದು. ಆದ್ದರಿಂದ ಯಾವಾಗಲೂ ಒಂದು ಪುಟ ಓದಿದ ಮೇಲೆ ನೋಟ್ಸ್ ಮುಚ್ಚಿಟ್ಟು ಅದನ್ನು ಬರೆಯಲು ಪ್ರಯತ್ನಪಡಿ. ಒಂದು ಪುಟ ಬರೆದಾದ ಮೇಲೆ ಅದನ್ನು ನೋಟ್ಸ್ ಜೊತೆ ಹೊಂದಿಸಿ ನೋಡಿ. ಆಗ ನೀವು ಎಷ್ಟರಮಟ್ಟಿಗೆ ಜ್ಞಾಪಕದಲ್ಲಿಟ್ಟುಕೊಂಡಿರುವಿರಿ ಎಂದು ನಿಮಗೆ ತಿಳಿಯುತ್ತದೆ.
- ಓದುವಾಗ ಪ್ರತಿ 20 ನಿಮಿಷಕ್ಕೊಂದು ಬಾರಿ 5 ನಿಮಿಷಗಳ ಕಾಲ ವಿಶ್ರಾಂತಿ ತೆಗೆದುಕೊಳ್ಳಿ. ಸ್ವಲ್ಪ ಎದ್ದು ಓಡಾಡಿ, ಕೈಕಾಲುಗಳನ್ನು ನೀಡಿ, ದೀರ್ಘವಾಗಿ ಉಸಿರಾಡಿ ಪುನಃ ಓದಲು ಕುಳಿತು

13ನೇ ಪುಟ ನೋಡಿ

ಕೊಳ್ಳಿ.

○ 4–5ವರ್ಷದ ಹಿಂದಿನ ಪ್ರಶ್ನೆಪತ್ರಿಕೆಯನ್ನು ಉತ್ತರಿಸುವುದರಿಂದ 75% ಪ್ರಶ್ನೆ ಪತ್ರಿಕೆಯ ಮಾದರಿಯು ನಿಮಗೆ ಮನದಟ್ಟಾಗುವುದು.

○ ನಮ್ಮಕ್ಲಾಸಿನ ಜಾಣಲಕ್ಷ್ಮಿ ಪರೀಕ್ಷೆ ದಿನದಂದು ಸರಿಯಾಗಿ ತಿಂದು ಬಾರದ ಕಾರಣ ಕ್ಲಾಸಿನಲ್ಲಿ ಮೂರ್ಛೆ ಹೋಗಿ ಆಸ್ಪತ್ರೆ ಸೇರಿದ್ದರಿಂದ ಅವಳ ಒಂದು ವರ್ಷ ಹಾಳಾಯಿತು. ಆದ್ದರಿಂದ ಗಾಬರಿ (Tension) ಬೇಡ.ದೈಹಿಕವಾಗಿ ನೀವು ದಣಿದರೆ ನಿಮ್ಮ ಮಾನಸಿಕ ಶಕ್ತಿ ಕುಗ್ಗುತ್ತದೆ.

○ ಕೊನೆಯದಾಗಿ ವಿದ್ಯಾರ್ಥಿಗಳಿಗೆ 'ಏಕಾಗ್ರತೆ' ಬಹಳ ಮುಖ್ಯ ಮನಸ್ಸನ್ನು ಒಂದೇ ಕಡೇ ಕೇಂದ್ರಿಕೃತಗೊಳಿಸುವುದನ್ನು ರೂಢಿಸಿಕೊಳ್ಳಲು ಈ ಕೆಳಗಿನ 2 ಸಣ್ಣ ವಿಧಾನಗಳು :

A–1, B–2, C–3... ಹೀಗೆ Z–26ರ ವರೆಗೆ ಜೋರಾಗಿ ಅತ್ಯಂತ ಕಡಿಮೆ ಸಮಯದಲ್ಲಿ ಹೇಳಲು ಪ್ರಯತ್ನಿಸಿರಿ. ಆಮೇಲೆ ಓದಲು ಕುಳಿತುಕೊಳ್ಳಿ.

ಗೋಡೆ ಗಡಿಯಾರವನ್ನು ತದೇಕಚಿತ್ತದಿಂದ ನೋಡುತ್ತಾ 60, 59, 58.. ಹೀಗೆ ಹಿಂದಿನಿಂದ 1ರ ವರೆಗೆ ಎಣಿಸುತ್ತಾ ಬನ್ನಿ. ಆಮೇಲೆ ಓದಲು ಕೂರುವುದರಿಂದ ನಿಮ್ಮ ಏಕಾಗ್ರತೆ ಹೆಚ್ಚುವುದು.

● ಎಡಿಕೇರಿ ಸುದರ್ಶನ್
ಬೆಂಗಳೂರು



ಮಕ್ಕಳ ರಂಗ ತರಬೇತಿ ಶಿಬಿರವು, ಸಮುದಾಯ, ಬೀದರ ಜಿಲ್ಲೆ ಇಲ್ಲಿ ದಿನಾಂಕ **3-5-98** ರಿಂದ **17-5-98**ರ ತನಕ ನಡೆಯಿತು.ಈ ಶಿಬಿರದಲ್ಲಿ **ಗೀತಾ ಮೋಂಟಡ್ಕ**ರವರು ಮಿಮಿಕ್ರಿ ಪಟುವಾಗಿ, ಶಿಬಿರದ ನಿರ್ದೇಶಕರಾಗಿ **"ಬೆಟ್ಟಕ್ಕೆ ಚಳಿಯಾದರೆ"** ನಾಟಕದ ಸಹ ನಿರ್ದೇಶಕರಾಗಿ ದುಡಿದು ಹಿಂತಿರುಗಿ ಬಂದಿದ್ದಾರೆ. ಇವರು ನಮ್ಮ ಪತ್ರಿಕೆಯಲ್ಲಿ ಕಾರ್ಯ ನಿರ್ವಾಹಕಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಇವರಿಗೆ ನಮ್ಮ ಜನಾಂಗದ ಪರವಾಗಿ ವಂದನೆಗಳು.

–ಸಂಪಾದಕಿ

# ನಿಮ್ಮ ಪತ್ರಗಳು

## ಗೌಡ ಸಮಾಜಗಳ ಲೆಕ್ಕ ಪತ್ರ ಎಲ್ಲಿ?

ಮಾನ್ಯರೆ,

ದಿನಾಂಕ 12-4-98ರಂದು ತಡಿಯಪ್ಪನ ಕುಮಾರ ಜಯನವರ ಅಧ್ಯಕ್ಷತೆಯಲ್ಲಿ ಮೈಸೂರಿನ ಕಲಾಮಂದಿರದಲ್ಲಿ ನಡೆದ ಅರೆಭಾಷೆ ಕಾರ್ಯಕ್ರಮಕ್ಕೆ ಹಣ ಸಂಗ್ರಹಿಸಿ ಕಾರ್ಯಕ್ರಮ ನಡೆಸಿರುವುದು ಇಡೀ ಗೌಡ ಜನಾಂಗಕ್ಕೆ ತಿಳಿದಿರುವ ವಿಷಯ. ಈ ಕಾರ್ಯಕ್ರಮಕ್ಕೆ ಸಂಗ್ರಹ ಮಾಡಿದ ಹಣದ ಆಯ ವ್ಯಯ ಪಟ್ಟಿಯನ್ನು ಕೊಡಗು ಸಂಗಾತಿಯಲ್ಲಿ ಮುದ್ರಿಸಿ ತಮ್ಮ ಶುದ್ಧ ಹಸ್ತವನ್ನು ಜನಾಂಗದ ಮುಂದೆ ಇಟ್ಟು ಇಡೀ ಜನಾಂಗದ ವಿಶ್ವಾಸಕ್ಕೆ ಪಾತ್ರರಾಗಿದ್ದಾರೆ. ಚಿಕ್ಕ ಸಮಿತಿಯಾದರೂ ಚೊಕ್ಕ ಕಾರ್ಯ್ರಮ ನಡೆಸಿ ಪ್ರಶಂಸೆಗೆ ಪಾತ್ರವಾದ ಹಾಗೆ ನಮ್ಮ ಜನಾಂಗದ ಗೌಡ ಸಮಾಜದವರು, ವಿದ್ಯಾ ಸಂಘದವರು ಹಾಗೂ ಇನ್ನಿತರ ಸಂಘ ಸಂಸ್ಥೆಗಳು ಬಹಳ ಹಿಂದಿನಿಂದಲೂ ಕಾರ್ಯ ನಿರ್ವಹಿಸುತ್ತಿದ್ದು,ಇದುವರೆಗೆ ಯಾವ ಲೆಕ್ಕಪತ್ರವನ್ನಾಗಲಿ, ವಾರ್ಷಿಕ ಮಹಾಸಭೆಯನ್ನಾಗಲಿ ಅಥವಾ ಚುನಾವಣೆಯನ್ನಾಗಲಿ ನಡೆಸದೆ ಜನಾಂಗದ ಕೋಪಕ್ಕೆ ಪಾತ್ರವಾಗಿರುವುದೂ ಅಲ್ಲದೆ ಸಂಗ್ರಹವಾದ ಹಣವನ್ನು ಏನು ಮಾಡುತ್ತಿರುವರು ಎಂದು ಜನಾಂಗಕ್ಕೆ ತಿಳಿಸುವವರಾಗಬೇಕು. ಜನರಿಂದ ಸಂಗ್ರಹವಾದ ಹಣದ ಬಗ್ಗೆ ಇಷ್ಟು ನಿರ್ಲಕ್ಷತೆ ತೋರುವ ಸಮಾಜದ ಏಳಿಗೆಗೆ ದುಡಿಯದ ಇಂತಹ ಕಾರ್ಯಕಾರಿ ಮಂಡಳಿಯವರು ಈ ಕೂಡಲೇ ಸಮಾಜದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಂಡು ಸಮಾಜದ ಏಳಿಗೆಗೆ ದುಡಿಯಬೇಕು. ಇಲ್ಲದಿದ್ದರೆ ಸಮಾಜವನ್ನು ಏಳಿಗೆಯತ್ತ ಕೊಂಡೊಯ್ಯುವ ಆಸಕ್ತರಿಗೆ ಬಿಟ್ಟು ಕೊಡಬೇಕು. ಹಲವಾರು ವರ್ಷಗಳಿಂದ ಲೆಕ್ಕವನ್ನು ತೋರಿಸದೇ ಇರುವ ನಿಷ್ಕ್ರಿಯ ಕಾರ್ಯಕಾರಿ ಮಂಡಳಿಯವರು ನಮ್ಮ ಜನಾಂಗಕ್ಕೆ ಬೇಡವೇ ಬೇಡ. ಇದನ್ನು ಎಲ್ಲ ಗೌಡ ಭಾಂಧವರು ಖಂಡಿಸಬೇಕು. ಲೆಕ್ಕ ಪತ್ರವನ್ನು ಜನರ ಮುಂದಿಡಲು ಹಿಂಜರಿಯುತ್ತಿರುವ ಕಾರಣವೇನು? ನಮ್ಮ ಕೊಡಗು ಸಂಗಾತಿ ಪತ್ರಿಕೆಯಲ್ಲಿ ಮುದ್ರಿಸಿದರೆ ನಮ್ಮ ಗೌಡ ಜನಾಂಗಕ್ಕೆ ತಿಳಿಯುತ್ತದೆ. ಅಲ್ಲದೆ ಸಮಾಜದ ಬಗ್ಗೆ ವಿಶ್ವಾಸವೂ ಕಾಳಜಿಯು ಮೂಡುತ್ತದೆ. ಲೆಕ್ಕ ಪತ್ರವನ್ನು ಜನರ ಮುಂದಿಡುತ್ತಾರೆಂದು ಇನ್ನಾದರು ನಂಬಬಹುದೇ?

○ **ಇಂದ್ರಕುಮಾರ್**, ಮಡಿಕೇರಿ

## ವಂದನೆಗಳು

ಮಾನ್ಯರೆ,

ತಾರೀಕು 12-4-1998ರಲ್ಲಿ ಮೈಸೂರು ನಗರದಲ್ಲಿ ಕೊಡಗು ಸಂಗಾತಿಯ ವತಿಯಿಂದ ಏರ್ಪಡಿಸಿದ ವಾರ್ಷಿಕೋತ್ಸವದಲ್ಲಿ ನಾವು ಪಾಲ್ಗೊಂಡು ರಮಣೀಯವಾದ ಕಾರ್ಯಕ್ರಮವನ್ನು ವೀಕ್ಷಿಸಿದೆವು. ಈ ಸಂದರ್ಭದಲ್ಲಿ ನಮ್ಮ ವತಿಯಿಂದ ಹರಿಸೇವಾ ರೂಪಕವನ್ನು ವೇದಿಕೆಯಲ್ಲಿ ಪ್ರದರ್ಶಿಸಲು ಅನುವು ಮಾಡಿ ಕೊಟ್ಟಿರುವಿರಿ. ಅದಕ್ಕೆ ನಾವು ನಿಮಗೆ ಒಕ್ಕೂಟದ ಪರವಾಗಿ ಆಭಾರಿಯಾಗಿರುತ್ತೇವೆ. ಅಲ್ಲಿ ಪ್ರದರ್ಶಿಸಲ್ಪಟ್ಟ ಇತರ ಕಾರ್ಯಕ್ರಮಗಳು ಬಹಳ ಮನೋಹರವಾಗಿದ್ದು ಪ್ರೇಕ್ಷಕರಿಗೆ ಪ್ರಸಂಸನೀಯವಾಗಿದ್ದವು

ಮಧ್ಯಾಹ್ನದ ಸವಿಯಾದ ಭೋಜನ ಮತ್ತು ಸಂಜೆಯ ಕಾಫಿಯ ವ್ಯವಸ್ಥೆ ಉತ್ಕೃಷ್ಟವಾಗಿತ್ತು.

ತಾವು ನನ್ನನ್ನು ಸಮಾರಂಭದ ವೇದಿಕೆಯಲ್ಲಿ ವಿಶೇಷ ಸ್ಥಾನವನ್ನು ಕೊಟ್ಟು ಗೌರವಿಸಿದುದ್ದಕ್ಕೆ ಒಕ್ಕೂಟದ ಪರವಾಗಿ ತಮಗೆ ವಂದನೆಯನ್ನು ಸಲ್ಲಿಸುತ್ತೇನೆ.

"ಕೊಡಗು ಸಂಗಾತಿ"ಎಂಬ ಸಂಚಿಕೆಯು ಶುಕ್ಲಪಕ್ಷದಂತೆ ಬೆಳೆದು ಓದುಗರಿಗೆ ಜ್ಞಾನಾಮೃತವನ್ನು ಕೊಡಲಿ ಎಂದು ಹಾರೈಸುತ್ತೇನೆ.

ತಮ್ಮ ವಿಶ್ವಾಸಿ
**ಚಿಯೇಂಡಿರ ರಾಧ ಯಾದವ**
ಅಧ್ಯಕ್ಷರು, ಕೊಡಗು ಗೌಡ ಮಹಿಳಾ ಒಕ್ಕೂಟ, ಮಡಿಕೇರಿ

## ಟೀಕೆ-ಟಿಪ್ಪಣಿ

ತಾ|| 1-5-98ರಲ್ಲಿ ಭಾಗಮಂಡಲದಲ್ಲಿ ನಡೆದ ಗೌಡರ ಸಮ್ಮೇಳನದ ಕಾರ್ಯಕ್ರಮಗಳೇನೊ ಚೆನ್ನಾಗಿತ್ತು. ಆದರೆ ವೇದಿಕೆಯ ವ್ಯವಸ್ಥೆ ಸರಿಯಾಗಿರಲಿಲ್ಲ. ಇದರಿಂದ ಪ್ರೇಕ್ಷಕರಿಗೆ ಕಾರ್ಯಕ್ರಮವನ್ನು ವೀಕ್ಷಿಸಲು ಕಷ್ಟ ಸಾಧ್ಯವಾಯಿತು. ಚಪ್ಪರವನ್ನು ಇನ್ನು ಸ್ವಲ್ಪ ಮೇಲೆ ಎತ್ತರಿಸಿ ವೇದಿಕೆಯನ್ನು ಸ್ವಲ್ಪ ಎತ್ತರದಲ್ಲಿ ನಿರ್ಮಿಸಿದ್ದಿದರೆ ಚೆನ್ನಾಗಿರುತ್ತಿತ್ತು.ವೇದಿಕೆಯ ಮೇಲೆ ಅಷ್ಟೊಂದು ಜನ ಅತಿಥಿಗಳನ್ನು ಕೂರಿಸುವ ಅವಶ್ಯಕತೆ ಇರಲಿಲ್ಲ. ಧ್ವನಿವರ್ಧಕದ ಅಡಚಣೆಯು ಸಹ ಕಂಡುಬರುತ್ತಿತ್ತು. ಪತ್ರಕರ್ತರಿಗೆ ವಿಶೇಷ ಆಸನಗಳನ್ನು ಏರ್ಪಡಿಸಬೇಕಿತ್ತು. ಆ ನಾಡಿಗೆ ದುಡಿದ ಹಿರಿಯ ವ್ಯಕ್ತಿಯಾದ ಹೊಸೂರು ಜೋಯಪ್ಪನವರನ್ನು ವೇದಿಕೆಯಲ್ಲಿ ಕೂರಿಸಬೇಕಿತ್ತು ಅತಿಥಿಗಳ ಭಾಷಣಕ್ಕಿಂತ ನಿರೂಪಣೆ ತುಂಬಾ ಅತಿಯಾಯ್ತೆಂದು ಅಲ್ಲಲ್ಲಿ ಕೇಳಿಬರುತಿತ್ತು. ಮುಖ್ಯ ಅತಿಥಿಗಳಾಗಿ ಬಂದವರಲ್ಲಿ ಯಾರೊಬ್ಬರು ಸಹ ಭಾಷೆ ಮತ್ತು ಸಂಸ್ಕೃಯ ಬಗ್ಗೆ ಮಾತನಾಡದಿರುವುದು ಬಹಳ ಖೇದದ ಸಂಗತಿ.

○ ಮಣ್ಣಾಂಡ್ರ ರಮೇಶ್, ಮೈಸೂರು.

# ಕರಿಚೆನ್ನ

**ಅರೆ ಭಾಷಿಕ ವಿಭಾಗ**

## ಧಾರವಾಹಿ - 5

ಮೂಲಕಥೆ : ಅಶ್ವಥಿ ಅರವಿಂದ್

ಅರೆಭಾಷೆಗೆ : ಎಂ.ಇ. ಮುಹಮ್ಮದ್

**ಕಳೆದ ಸಂಚಿಕೆಯಲ್ಲಿ.....**

**ವೀರನ ಕರ್ಕಂಡ್ ಬಾಕೆ ಅವ್ವ ಪೊಪ್ಪ ಬಸ್‌ಸ್ಟ್ಯಾಂಡ್‌ಗೆ ಹೋಗಿದ್ದದೆ. ವೀರ ಇಲ್ಲಿ ಬೋರುಗುಡ್ಡೆ ದೇವಯ್ಯನ ಕಾರ್‌ಲಿ ಬಂದದ್ ಅಪ್ಪಂಗೆ ಗೊತ್ತ್ಲೆ. ಸ್ವಲ್ಪ ಹೊತ್ತಿಗೆ ಪೊಪ್ಪ ಮನೆಗೆ ಬಂದದೆ. ಗೌರಂಗೆ ಏನಿದ್ದರೂ ರಂಜನ್‌ನ ಮೇಲೆ ಗ್ಯಾನ. ಅವ್ನ ಗ್ಯಾನ ಮಾಡಿ ಅವ್ವು ಮಂಕಾಗಿದ್ದದೆ. ಆಗ ಮಾದಪ್ಪ ಏನಾತವ್ವ ನಿಂಗೆ ಯಾಕೆ ಮಂಕಾಗಿ ಒಳಂತ ಕೇಳ್ದ. ಏನಿಲ್ಲೆ, ಚೆನ್ನಾಗೊಳೆ ತೇಳಿ ಸುಮ್ಮನಾದೆ. ನಿಂಗೆ ಒಂದ್ ಒಳ್ಳ ನೆಂಟಸ್ಥನ ಸಿಕ್ಕಿದ್ರೆ ಚೆನ್ನಾಗಿರ್ತಿತ್ತ್ತ ಅಪ್ಪ ಹೇಳ್ವಾಕನ ವೀರ ಬೋರುಗುಡ್ಡೆ ದೇವಯ್ಯನ ಮಜನಂತವಂತೇಳ್ಕಕ ಪೊಪ್ಪ ಬೈದದೆ. ಗೌರ ಮತ್ತೆ ರಂಜನ್‌ನ ಗ್ಯಾನಲಿ ಮುಳ್ಗಿದೆ.**

**ಮುಂದೆ ಓದಿ.......**

ಐತ್ವಾರ ಸಾಯಂಕಾಲ ಕಿಟಕಿ ತೆರ್‌ದ್ ದೇವಯ್ಯನ ಬಂಗ್ಲೆ ಕಡೆ ಗೌರ ನೋಡ್ತ್. ಅಲ್ಲಿ ನಿತ್ಕಂಡ್ ನೋಡ್ರೆ ರಂಜನ್‌ನ ಮನೆ ಕ್ವಾಂಬರೆ ಕಾಣ್ತಿತ್ತ್.

ಸಾಯಂಕಾಲ ಇಬ್ಬರ್ ಒಂದ್‌ಕಡೆ ಸೇರೊಕೂತಾದ್ರೆ ರಂಜನ್ ಒಂದ್ ಸಿಗ್ನಲ್ ತೋರ್‌ಸ್ತಿತ್ತ್. ಅಂದ್ರೆ ಅಂವ ಎರ್‌ಡ್ ಮೂರ್ ಬೆಂಕಿಕಡ್ಡಿನ ಒಟ್ಟಿಗೆ ಹಿಡ್ದ್ ಒಮ್ಮೆ ಗೀರ್ ಬುಡ್ತಿತ್ತ್. ಗೌರ ಆ ಬೆಳ್‌ಕ್ ಕಾಂಬಕೆ ಕಣ್ಣ್ ಬುಟ್ಟ್‌ಕಂಡ್ ಕಾದ್ ನಿತ್ತ್‌ಕಣ್ತಿತ್ತ್.

ವೀರಂಗೆ ಒಳ್ಳೆ ನಿದ್ದೆ, ಪಕ್ಕದ ಕ್ವಾಂಬರೆಲಿ ಪೊಪ್ಪನ ಗೊರಕೆ ಕೇಳ್ದ. ಇವುಕೆ ಇಬ್ಬರ್‌ಗೂ ಎಚ್ಚರ ಆಕಾಗದ್‌ತ ಗೌರ ಮನೆ ದೇವ್ರುನ ಮನ್ಸ್‌ಲೆ ಬೇಡಿಕಂಡತ್. ಅಷ್ಟ್ರಲಿ ರಂಜನ್‌ನ ಕ್ವಾಂಬರೆಲಿ ಅವ್ಳ ಗ್ಯಾನ ಮಾಡಿಕಂಡ್ ಇದ್ದ ಬೆಳ್‌ಕ್ ಮಿಂಚಿದ್ದ್ ಕಂಡ್‌ತ್. ಗೌರ ಮೆಲ್ಲೆ ಸದ್ದಿಲ್ಲದೆ ಬಾಗ್‌ಲ್ ತೆರ್ದ್ ಹೊರ್ಗೆ ದಾಟಿತ್. ಬೋರ್‌ಗುಡ್ಡೆ ಕಾಡ್‌ಲೆಲ್ಲೋ ಕುದುಕಂಗ ಮರ್ಳ್ವದು ಸದ್ದ್ ಕೇಳ್ತಿತ್ತ್. ಹೊಳೆಕರೆ ಆದ್ರಂದ ಒಳ್ಳ ಕ್ವಾಟೆಗಾಳಿ ಬ್ಯಾರೆ ಇತ್ತ್. ಕಳಲಿದ್ದ ಹುಲ್ಲುಮುಂಡದ ಹತ್ರ ಮೊದ್ಲ ಎತ್ತಿದಂವ ರಂಜನ್ ಗೌರ ಹೋಗಿ ಎತ್ತಿದಂಗೆ ಅಂವ ಅವ್ಳ್ನ ಬಾಚಿ ತಬ್ಬಿ ಹಿಡ್ ಕಂಡತ್.

ಅವನ ಹಿಡಿಯುಟಕ್ಕೆ ಅವ್ಳ ಮೈಮೂಳೆ ಎಲ್ಲಾ ಹೊಡಿಹೊಡಿ ಆದಂಗೆ ಆತ್ ಗೌರಂಗೆ "ಸಾಕ್ ಸಾಕ್" ನಿಂದ್ ದೊಡ್ಡ,ಅವ್ಳ ಅವನ ತಡಿಯೊಂಗೆ ಕೈ ಅಡ್ಡ ಮಾಡ್ತ್.

"ರಂಜನ್......"

"ಏನ್‌ನೆ ಗೌರ"

"ಇನ್ನ್‌ನಾವ್ ಆದಸ್ಟ್ ಬ್ಯಾಗ ಮೊದ್ವೆ ಮಾಡ್ಕಣಕು".

ಮೊದ್ವೆಗೆ ಏನೀಗ ಅಸ್ಟ್ ಆತ್ರ ನಿಂಗೆ ? ನಾವ್ ಇನ್ನೂ ತುಂಬಾ ಸಮಯ ಹಿಂಗೆ ಪ್ರೀತಿಸ್ಕಂಡೇ ಇರೋಕು ಗೊತ್ತಾ ! ಅಂವ ತಬ್ಬಿ ಹಿಡ್ದಿದ್ದ ಹಿಡಿನ ಮತ್ತಸ್ಟ್ ಬಿಗಿ ಮಾಡ್ಕಂಡ್ ಅವ್ಳ ಭುಜದ ಮೇಲೆ ಮುಖ ಇಟ್ಟ್ ಹೇಳ್ತ್.

"ಹೂಂ......ನಂಗೆ ತುಂಬಾ ಕಾಲ ಇರಕಿತ್ತ್ ನಿಜ. ಆದ್ರೆ ಅದರ್ನ ಮೊದ್ಲೇ ಗ್ಯಾನ ಮಾಡೋಕಿತ್ತ್ ಇನ್ನ್ ಅದೆಲ್ಲ ನಡೆಯಂಗಿಲ್ಲೆ. ಈಗ ನಮ್ಮ ಈ ಆಟನೆಲ್ಲ ಮರೇಲಿ ಕುದ್ದ್ ಕಂಡ್ ಒಬ್ಬ ನೋಡ್ತ್ ಉಟ್ಟ್".

"ಯಾರಂವ ಆ ನಾಲಾಯಿಕ್".ರಂಜನ್ ಸಿಟ್ಟ್‌ಲಿ ಕೇಳ್ತ್.

ಗೌರ ಅವ್ನ ಕೈನ ತನ್ನ ಕೈಲಿ ಹಿಡ್ಕಂಡ್ ಕಿಬ್ಬೊಟ್ಟೆ ಮೇಲೆ ಸವರ್ಕಂಡ್ ಹೇಳ್ತ್.

"ಇದಾ ಇಂವ" ಅವ್ಳ ಮಾತ್ ಕೇಳಿ ಬೆಂಕಿಕೆಂಡ ಮೆಟ್ಟಿದಾಗೆ ದೂರಕ್ಕೆ ಹೋತ್ ರಂಜನ್."ಗೌರ ನೀನ್ ಯಾಕೆ ಈ ಸಂಗ್ತಿನ ನಂಗೆ ಮೊದ್ಲೆ ಹೇಳ್ತ್‌ಲೆ?" ಅವ್ನ ಸ್ವರ ಬದ್‌ಲಾತ್.

"ಮೊದ್ಲೇ ಹೆಂಗೆ ಹೇಳ್ವದ್? ನಂಗೆ ಗೊತ್ತಾಗಿ ಈಗ ಎರ್ಡ್ ವಾರ ಆತ್ ಅಸ್ಟೆ. ಅಲ್ಲಿಂದಿತ್ತ ನಿನ್ನ ನಾ ಕಂಡತ್ತೆ ಇಲ್ಲೆಲಾ? ಅದೆಂತಾದ್ರು ಈ ಕೂಸ್‌ನ ಮಾತ್ರ ನೀನ್ ಹೆರಿಕೆ ಬೊತ್ತ್.

ಇದ್ ಒಳ್ಳ ಕತೆ ಆತಲ್ಲ. ಬಸ್ರಿ ಆದ ಮ್ಯಾಲೆ ಕೂಸ್‌ನ ಹೆರ್ದೆ ನಾನ್‌ಹೆಂಗೆ ಇರ್ದ್. "ಈಗೆಲ್ಲ ತೆಗ್ಸ್ನದು ದೊಡ್ಡ ಸಂಗತಿಯೇನಲ್ಲ ಒಂದ್ ಡಾಕ್ಟರ್ ಹತ್ರ ಪೋಯಿ" ರಂಜನ್ ಹೇಳ್ತ್.

"ಎಂತ ತೆಗ್ಸ್ನದು. ನಮ್ಮ ಸುರುನ ಕೂಸ್ನ ತೆಗ್ಸ್ನದಾ !

ಗೌರ ಬೆರ್ಚಿ ಬಿದ್ದಂಗೆ ಕೇಳ್ತ್.

ನಾನ್ ಸುರುಲೆ ನಿಂಗೆ ಎಚ್ಚರ ಕೊಟ್ರೂ ನೀನ್ ಬೇಕೂಂತೇಳಿ ಕೊಟ್ಟ ಆ ಫಿಲ್ಸ್‌ನ ತಿನ್ನದೆ ಬಿಸಾಡಿರೊಕು ನನ್ನ ಸಿಕ್ಕ್ಸ್‌ಕೆ.

ರಂಜನ್ ಹುಚ್ಚನಂಗೆ ತಲೆ ಕೆರ್ಕಂಡ್ ಹೇಳ್ತ್. ಯಾಕೆ ರಂಜನ್ ಗಂಡಾಗಿ ನೀನ್

ಇಸ್ಪೊಂದ್ ಹೆದ್ರುದು. ನಿಂಗೆ ಡ್ಯಾಡಿ ಹತ್ರ ಹೇಳಿಕೆ ಏನ್ ? ನಾನ್ ಗೌರನ ಪ್ರೀತಿಸ್ತಾ ಒಳೇತ.ಅವಳ್ನೀ ಮೊದ್ವೆ ಮಾಡ್ಕಂಡನೇಂತ

ನೀನ್ ಸೊಲ್ಪ ಸುಮ್ನಿದ್ದಿಯಾ, ಆಸ್ತಿ ಕಳ್ಕಂಡ್ ಪಾಪರಾದ ನಾಡ್‌ಕೊಲ್ಲಿ ಮಾದಪ್ಪನ ಮಗಳ್ನ ನಾನ್ ಮೊದ್ವೆ ಮಾಡ್ಕಂಡನೇಂತ ಹೇಳ್ರೆ ಡ್ಯಾಡಿ ನನ್ನ ಕತೆ ಮುಗ್ಸಿದೆ. ಗೊತ್ತಾ?

ಅಂವ ತಲೆ ಅಡಿಗೆ ಹಾಕ್ಕಂಡ್ ನೆಲಂದ ಹುಲ್ಲ್‌ಕಡ್ಡಿನ ತಕಂಡ್ ತಿರ್ಗಿಸಿಕಂಡ್ ಹೇಳ್ತ್.

ಕೊಂಡಾಟ ಮಾಡಿ ರಾತ್ರಿ ನನ್ನ ಕರ್ದ್ ಪ್ರೀತಿಸ್ಕನ ನಿಂಗೆ ಇದ್ ಗ್ಯಾನ ಇತ್ತ್‌ಲ್ಯಾ? ನನ್ನ ತುಂಬಿದ ಮೈಯಿಂದ ರಸ ಹೀರ್ ಕಾಕನ ಇಂತ ಒಂದ್ ಕೇಡ್ ಮುಂದೆ ಬಾದೂಂತ ನಿಂಗೆ ಗೊತ್ತಾತ್‌ಲ್ಯಾ ? ಇಲ್ಲೆ ಹೆಂಗಾದರ್ ಕಾರ್ಯ ಕಳೀಲೀಂತ ಗ್ಯಾನ ಮಾಡ್ಬ ಹೆಂಗೆ ? ಒಂದ್ ಮಾತ್ರ ಗ್ಯಾನ ಇಟ್ಕ ರಂಜನ್, ನೀನ್ ನನ್ನ ಮೊದ್ವೆ ಮಾಡ್ಕ ಇಲ್ಲೆ ಬುಡು, ನಾನ್ ಮಾತ್ರ ಈ ಕೂಸ್‌ನ ಹೆರ್ದ್ದ ಸತ್ಯ. ಮಾನ ಹೋದರ್ ಹೋಗಲಿ. ನಾನ್ ಈ ಕೊಸ್‌ನ ಸಾಕದೆ ಇರ್ಕಿಲೆ. ಅಸ್ಟ್ ಹೇಳಿ ಗೌರ ಹೊರ್‌ಟತ್ತ್.

"ಗೌರ ನಿಲ್ಲ್" ರಂಜನ್ ಅವ್ಳ ಕೈ ಹಿಡ್ಡ್ ಅಲ್ಲೇ ಕುದುರ್ಸಿತ್. ಗೌರ....... ನೋಡ್ ಗೌರ, ನಂಗೆ ನಿನ್ನ ಮ್ಯಾಲೆ ಸಿಟ್ಟೇನ್ ಇಲ್ಲೆ. ನಾನ್ ಮೊದ್ವೆ ಮಾಡ್ಕ ಣೋದಾದ್ರೆ ಅದ್ ನಿನ್ನ ಮಾತ್ರ. ಆದ್ರೆ ನಂಗೆ ಸೊಲ್ಪ ಸಮಯ ಬೇಕ್ ಗೌರ. ಅದ್ಕೆ ನಾನ್ ಹೇಳ್ದ್ ಈಗ ತೆಗ್ಸಿಬುಡೋ ನಾಂತ. ಇನ್ನೀಗ ಅದರ್ನ ಉದ್ದಕ್ಕೆ ಮಾತಾಡಿ ಏನ್ ಫಲ ಇಲ್ಲೆ ಬುಡು. ನಾಳೆ ರಾತ್ರಿ ನಾವು ಇಲ್ಲಿಂದ ಹೊರಡೊಕು. ಯಾರಿಗೂ ಗೊತ್ತಾದು ಬ್ಯಾಡ. ಹೋಗಿ ರಿಜಿಸ್ಟ್ರ ಮೊದ್ವೆ ಮಾಡ್ಕಂಡ್ ಸೊಲ್ಪ ದೂರಲಿ ಎಲ್ಲಾದ್ರ್ ಒಂದು ಮನೆ ಮಾಡ್ಕಂಡ್ ಇರನು, ಆಕಿಲೆ ? ರಂಜನ್ ಪ್ರೀತಿಂದ ಗೌರನ ಬೆನ್ನ್ ಸೌರಿ ಹೇಳ್ತ್.

ಅಷ್ಟಾಕಾಕನ ಗೌರಂಗೆ ರಂಜನ್ನ್‌ನ ಮ್ಯಾಲೆ ಏನೋ ಒಂದು ನಂಬಿಕೆ ಬಂದಂ ಗಾತ್. ಅವ್ಳ ಅವನ ಗುಂಗುರು ಕೂದ್ಲ್ ಸೆರಿಗೆ ಅವ್ಳ ಕೈಬೆರಳ್‌ನ ನುಗ್ಗಿಸ್ಕಂಡ್ ಅವ್ನ ಭುಜಕ್ಕೂ, ಮುಖಕ್ಕೂ ಮುತ್ತ್ ಕೊಟ್ಟ್ ಹೇಳ್ತ್.

"ಇದರ್ಲಿ ನಿನ್ನ ನಾನ್ ದೂರ್ದ್ದಲೆ ರಂಜನ್. ನಾವಿಬ್ಬರ್ ಸೇರ್ಕಂಡ್ ತಾನೆ ಈ ಕೂಸು ಆದ್. ನಂಗೆ ಎಷ್ಟ್‌ಕಷ್ಟ ಬಂದ್ರು ಸಹಿಸ್ಕಂಡನೆ. ನಿಂಗೆ ಮಾತ್ರ ಎಳ್ಳ್‌ನಷ್ಟ ಬ್ಯಾನೆ ಮಾಡ್ದ್ದಲೆ. ನಿನ್ನ ಪ್ರೀತಿ ಒಂದೇ ನಂಗೆ ಸಾಕ್".

"ನಾನ್ ನಿನ್ನ ಮರೆಯುಕಾದ್ಲೆ ಗೌರ".

ಅಂವ ಅವುಳ್ನ ತನ್ನ ಮಟ್ಟಲಿ ಮಲ್ಗಿಸಿ ಕಂಡ್ ಅವ್ಳ ಕೈನ ತನ್ನ ಮುಖಕ್ಕೆ ಒತ್ತಿ ಹಿಡ್ಕಣ್ತ್. ಅವರ ಆಸೆಯ ಹೊಳೆ ಮೊಗ್ಚಿ ಬತ್ತಿದ ಮ್ಯಾಲೆ ಅವು ಮನೆಗೋದೊ.

ಮಾರ್ನೆ ದಿನ ಹಗ್ಲಿಡಿ ಗೌರಂಗೆ ಒಂದ್ ತರಾ ಮಂಕ್. ಒಂದ್ ಕಡೆ ರಂಜನ್‌ನೊಟ್ಟಗೆ ಹೊಸ ಬದ್ಕ್‌ನ ಕಾಂಬೊ ಆಸೆ. ಇನ್ನೊಂದು ಕಡೆಪೊಪ್ಪ ಮತ್ತೆ ಮೀರನ ಬುಟ್ಟ್ ಹೋದು ಹೆಂಗೇಂತ್ತೇಳೊ ಬ್ಯಾಜಾರ. ರಂಜನ್ನ್‌ನ ಮಮ್ಮಿ ಡ್ಯಾಡಿ ಈ ಮೊದ್ವೆಗೆ ಒಪ್ಪಿಕಿಲೆ. ಗೌರಂಗೆ ಹೊತ್ತು ಕಳಿಯಕೆ ಕಷ್ಟ ಆತ್. ಅವ್ಳ ಸೀದ ತನ್ನ ಅವ್ವನ ಗೋರಿ ಹತ್ರ ಹೋತ್.

ನಾಡ್‌ಕೊಲ್ಲಿ ಮಾದಪ್ಪ ಶ್ರೀಮಂತನಾಗಿರ್ಕಾಕನ ಅವ್ನ ಹೆಣ್ಣ್ ಪೊನ್ನಮ್ಮ ಸತ್ತ್‌ದ್. ಪೊನ್ನಮ್ಮ ಚಿನ್ನದಂತ ಹೆಂಗ್ಸ್.

"ಮಮ್ಮಿ...... ನಾನ್ ಮಮ್ಮಿ ಗೌರ" ಅಷ್ಟ್ ಹೇಳ್ಕಾಕನ ಅವ್ಳ ತುಟಿ ನಡ್ಗಿದೆ.

ನೀನ್ ಕಣ್ಣಿಗೆ ಕಾಣ್ದೇ ಹೋದ್ರೂ ನಮ್ಮ ಜೊತೇಲೆ ಒಳ ಮಮ್ಮಿ. ರಾತ್ರೆ ಭಜನೆ ಹೇಳ್ಕಾಕನ ಯಾಗೋಳು ನಿನ್ನ ಗ್ಯಾನಾದೆ ಮಮ್ಮಿ ....ಆ ನಿನ್ನ ಇಂಪಾದ ಸ್ವರ ಈಗ್ಲೂ ಕೇಳ್ದಂಗೆ ಆದೆ. ನೀನ್ ನಾವ್ಗೆ ಒಳ್ಳೆದ್ ಮಾತ್ರ ಕಲ್ಸಿದ. ಇಂದ್ ನಾನ್ ದಾರಿ ತಪ್ಪಿಯೊಳೆ ಮಮ್ಮಿ...... ವಯಸ್ಸಿಗೆ ಬಂದ ನಾನ್ ರಂಜನ್ನ್‌ನ ಪ್ರೀತಿಸಿದ್ ತಪ್ಪಾ ಮಮ್ಮಿ? ಪ್ರೀತಿಸಿದಂವ ಕರಿಯ್ಕನ ನಾನ್ ರಾತ್ರಿ ಅಂವನೊಟ್ಟಗೆ ಹೋದ್ ತಪ್ಪಾ ಮಮ್ಮಿ? ತಪ್ಪಾಗಿದ್ರೆ ನನ್ನ ಕ್ಷಮಿಸ್ ಮಮ್ಮಿ, ಈ ನಿನ್ನ ಮಗಳ್ನ ಕ್ಷಮಿಸ್ ಮಮ್ಮಿ......ಗೌರ ಯಾರಿಗೂ ಕೇಳ್ದಂಗೆ ಮೆಲ್ಲೆ ಮನ್ಸ್‌ಲೆ ಎಲ್ಲಾ ಹೇಳಿ ಕಂಡ್ ಕಣ್ಣೀರ್ ಹಾಕಿತ್. ಕಾಣದ ಮಮ್ಮಿಯೊಟ್ಟಗೆ ಕಷ್ಟನ ಎಲ್ಲಾ ಹೇಳಿಕಂಡ್ ಅವ್ಳ ಮನೆಗೆ ಬಾತ್. ರಾತ್ರಿ ದೇವರ ದೀಪ ಇಸ್‌ಕಾಕನ ಅವ್ಳ ಕಣ್ಣ್‌ಲಿ ನೀರ್ ಬೀಳ್‌ತಿತ್ತ್.

ಅಕ್ಕ ಮರ್ದ್ದುದು ನೋಡಿ ಮೀರ ಗೂಡೆ ಕೇಳ್ತ್.

"ಯಾಕೆ ಅಕ್ಕಾ ಮರ್ದ್ತಾ ಒಳಾ". ಗೌರ ಮಾತೇ ಆಡ್ತ್‌ಲೆ. ರಾತ್ರಿ ಎಲ್ಲವ್ರು ಮಲ್‌ಗಿದೋ. ಮತ್ತೆ ಒಂದು ಗಂಟೆ ಕಳ್ತ್. ಪೊಪ್ಪಂಗೆ ಮೀರಂಗೆ ಒಳ್ಳೆ ನಿದ್ದೆ. ಗೌರ ತುಂಬಾ ಹೊತ್ತು ಕಾದ್ರೂ ಕಡ್ಡಿ ಬೆಳಕ್ ಕಂಡತ್ತ್‌ಲೆ.ಅವ್ಳ ಮೆಲ್ಲೆ ಜಗ್ಲ್‌ಲಿ ಬಂದ್ ಕುದ್ದತ್.

ಗುಮ್ಮ, ನಾಯಿ, ಕುದ್ಕ ಹಿಂಗೆ ಪ್ರಾಣಿಗ ಕೂಗೋ ಸದ್ದ್ ಒಂದರ ಹಿಂದೆ ಮತ್ತೊಂದು ಕೇಳ್ದೆ.

ರಂಜನ್ ಸುಳ್ಳ್ ಹೇಳಿಬುಟ್ಟತಾ ? ತಾನ್ ಹೊರ್‌ಟ್ ನಿಂತದ್ ಸುಮ್ಮನೆ ಆದೆ ಹೆಂಗೆ ? ಗ್ಯಾನ ಮಾಡಿಕಂಡೇ ಕುದ್ದಿರ್ಕಾಕನ ದರ್‌ಗ್‌ನ ಸದ್ದಾದ್ ಕೇಳ್ತ್.

ಗೌರಂಗೆ ಒಂದ್ ರೀತಿ ಕುಷಿ ಆತ್. ಅವ್ಳ ಕಣ್ಣ್ ಮಿಂಚಿತ್.ರಂಜನ್ ಬಂದಂಗೆ ಅವಳ ಕೈನ ಹಿಡ್ಕಂಣ್ತ್.

(ಸಶೇಷ)

# ಅಜ್ಜಿದ್ ಹೇಂಟೆಗೆ ಮೀಸೆ ಬಂದುಟು ಢಂ ಢಂ ಢಂ

ಸೀತವ್ವಜ್ಜಿ ಕೋಳಿ ಸಾಂಕುದರ್ಲ್ಲಿ ಜಾಣೆ. ತನ್ನ ಪಿಳ್ಳೆಕಳ ಮತ್ತೆ ಕೋಳಿ ಪಿಳ್ಳೆಗಳ ಪೊರ್ಲುರ್ಎಲಿ ಸಾಂಕ್‌ತಿತ್ತ್. ಪಿಳ್ಳೆಕಳಿಗೆ ಮೊಟ್ಟೆ ತಿನ್ಸುದೇ ಕೆಲ್ಸ. ಒಬ್ಬಂಗೆ ಹಸಿ ಮೊಟ್ಟೆ, ಇನ್ನೊಬ್ಬಂಗೆ ಹಸಿಬಿಸಿ ಮೊಟ್ಟೆ, ಇವ್ನಿಗೆ ಲಾಯ್ಕ ಬೆಂದ ಮೊಟ್ಟೆ, ಅವ್ನಿಗೆ ಆಮ್ಲೆಟ್, ಮನೆಮ್ಕೆಬುಲ್ಸೆ ತಪ್ಪಿರೆ ಮೊಟ್ಟೆ ಗ್ರೈಪು, ಕೆಲವೊಮ್ಮೆ ಎಗ್‌ಬುರ್ಜಿ ಹೀಂಗೆ ನಾನಾ ನಮೂನೆಲಿ ಮೊಟ್ಟೆದ್ ಉಪಯೋಗ ಆ ಅಜ್ಜಿ ಮನೇಲಿ ಆತಿತ್ತ್. ಶಿವನ ತಲೇಲಿ ಹೂ ತಪ್ಪಿರೂ ಅಜ್ಜಿ ಮನೇಲಿ ಮೊಟ್ಟೆ ತಪ್ಪಿಕಿಲೆ.

ಕಾಪುಂದ ಮರಿ ಇಳ್ಸಿದ ಮೇಲಂತೂ ಅಜ್ಜಿಗೆ ನಿದ್ದೆ ಬಾಕಿಲೆ. ನಾಯಿ, ಹಾವು, ಗಿಡ್ಗ, ಕಿರ್ಕೊಟ, ಕಕ್ಕೆ, ಕೀರಿ, ಕುಡ್ಕ, ಕೊತ್ತಿ ಇವುಗಳ ಬಾಯಿಂದ ಬಚಾವುಮಾಡಿ ಪಿಳ್ಳೆಗಳ ದೊಡ್ಡದ್ ಮಾಡ್ದೇನ್ ಸುಲ್ಬದ ಕೆಲ್ಸನಾ ? ನುಚ್ಚಿ, ತೌಡು, ಚಿಂದ, ಅರೆ ಚಟ್ಟ್‌ಬತ್ತ, ಮಕ್ಕ ಬುಟ್ಟ ಅನ್ನ ಏನಿದ್ದರೂ ಕೋಳಿಗಳ ಕರ್ ಹಾಕ್‌ತಿತ್ತ್. ಆ ಕಡೇ ಕೂಸು ಕುದ್ದ್ ಉಂಬಕನ ಕೋಳಿಗೆ ಆಚೆಂದ ಈಚೆಂದೆಲ್ಲಾ ಬಂದ್‌ಕಂಡ್ ಕೊಟಕೊಟಾಂತ ಕುಕ್ಕಿ ತಿಂದ್‌ಬುಡ್ತಿದ್ದೊ. ಆ ಕೂಸು ಕೋಳಿಗಳ್ಗೆ ಹೆದ್ರಿ ಬಟ್ಲ್ ಬುಟ್ಟ್ ಓಡ್ತಿತ್ತ್. ಕೈಲಿ ರೊಟ್ಟೆ ಇದ್ದರೂ ಅದನ್ನೂ ಸನ ಹಾರಿ ಕಚ್ಚಿಕಂಡ್ ಓಡಿ ಹೋಗ್ತಿದ್ದೊ. ಅಬ್ಬಬ್ಬಾ ಈ ಕೋಳಿಗಳ ಬಗ್ಗೆ ಎಷ್ಟ್ ಹೇಳಿರೂ ತೀರ್ಕಿಲೆ. ಪಡೋಣ ಬಾಗ್ಲ್‌ಂದ ಹೊಕ್ಕಿ ಮೂಡಣ ಬಾಗ್ಲ್‌ಂದ ದಾಟೆ ಹೋದವೆ. ಹಂಗೆ ಹೋದರೂ ಹೋಗಲಿ. ಆದರೆ ಅವು ಹೋದಲೆಲ್ಲಾ ಪಿಕ್ಕೆ ಹಾಕಿ ನೋಡಿಕೆ ಬತ್ತದೆ. ಅಂಗ್ಳಂದ ಜಗುಲಿಗೆ ಹಾರಿ, ಜಗ್‌ಲ್‌ಂದ ಕೈಯ್ಯಾಲೆಗೆ ಹಾರಿ, ಅಲ್ಲಿಂದ ಐಮರ ಮೇಲೆನೋ, ಕುರ್ಚಿ ಮೇಲೆನೋ, ಮೇಜದ ಮೇಲಿಸಿದ ಪುಸ್ತಕದ ಮೇಲೆನೊ ಕುದ್ದ್ ಪಚಕ್ ಮಾಡಿ ಹೋದವೆ. ಆ ಸಮಯಲೇ ಮನೆಗೇನಾರ್ ನೆಂಟ್ರ್‌ನಾಡ್ ಬಂದರಂತೂ 'ಅಯ್ಯೋಯ್ಯೋ' ಈ ಕೋಳಿಗಳ್ಗೆ ಮಾರಿ ಬಡಿಯೆಕೆಂತ' ಬಯ್ಕಂಡ್ ಪೇಚಾಡ್ದರ್ನ ನೀವೂ ನೋಡಿರುವರಿ.

ಕೆಲವು ಕೋಳಿಗ ಒಳಗೆ ನುಗ್ಗಿ ಹೊರೆಗೆ ಹೋಕೆ ದಾರಿ ಕಾಣ್ದೆ ಕಿಡ್ಕೆ, ಅಲ್ಲಿ–ಇಲ್ಲಿ ಹಾರಿಕೆ ನೋಡ್ವೆ. ಆಗಂತೂ ಅಲ್ಲಿದ್ದ ದೀಪ, ಎಣ್ಣೆಚರ್ಕ್, ಪಾತ್ರಗ, ಕನ್ನಡಿ ಎಲ್ಲಾ ಬಿದ್ದ್ ಚೂರ್ ಚೂರ್ ಆದೆ. ಹೂನ ಗಿಡ, ಮತ್ತೊಂದು ಗಿಡ ಬುಡಲೇ ಈ ಕೋಳಿಗಳ್ಗೆ ಮೋಚಿ. ಗಿಡಗಳ ಬೇರೆಲ್ಲಾ ಕೋಳಿ ಕೇರಿ ಮ್ಯಾಲೆ ಬಂದ್‌ಕಂಡ್ ಕೆಲವು ಸತ್ತೇಹೋದವೆ. ಅತ್ತಗಿಡಗಳೂ ಹಾಳ್, ಇತ್ತ ಅಕ್ಕಿ ಬತ್ತನೂ ಖಾಲಿ. ಆದರೆ ಈ ಅಜ್ಜಿಗೆ ಇದೆಲ್ಲಾ ಗೊತ್ತ್‌ಲೆ. ಒಟ್ಟಾರೆ ಮನೇಲಿ ಕೋಳಿ ಬೇಕು. ನೆಂಟಂಗೆ ಹೊಟ್ಟೆ ಒಡ್ಡೋಗಂಗೆ ತಿನ್ಸಿರೂ 'ಒಂದು ಕೋಳಿ ಕೊಲ್ಲಿಕೆ ಜೊತ್ತಾತಂತ' ಗೂಣಗಿದೆಲ್ಲಾ ! ಈ ಗೂಣ್ಗಾಟ ನಾವ್ಗೆ ಬಂದ ದೊಡ್ಡ ರೋಗ. ಕೋಳಿ ನೆಂಟಂಗೂ ಬೇಕು, ದೆವ್ವಗಳಿಗೆ ಕೊಡಿಕೂ ಬೇಕು. ಮಳೆಗಾಲಲಿ ಈ ದೆವ್ವಗಳಿಗೆ ಹೊರ್ಗೆ ಹೋಕಾದ್ಲೆ ನೋಡಿ. ಆಗ ಆ ದೆವ್ವಗಳಿಗೆ ಕಾರೋಣ [ಊಟ] ಕೊಡಿಕೂ ಕೋಳಿ ಬೇಕು. ಏನಿಲ್ಲರೆ ಮನೆಲಿ ಯಾರಿಗಾರ್ ಹೊಟ್ಟೆಬ್ಯಾನೆನೊ ವಾಂತಿನೊ ಆದರೆ ತಲೆ ಸುತ್ತ್ ತಂದ್ ಹರ್ಕೆ ಬುಡ್ಕೆನೂ ಕೋಳಿ ಬೇಕು. ಟೌನವು ಸೀದ ಆಸ್ಪತ್ರೆಗೆ ಹೋದವೆ. ಆದರೆ ಈ ದೆವ್ವಗ ಇರ್ದು ಹಳ್ಳಿಲಿ ತಾನೆ? ಟೌನಿಗೆ ದೆವ್ವಗ ಹೋದುಲೆ. ಯಾಕೆ ಗೊತ್ತುಟಾ? ಅಲ್ಲಿ ವಾಹನಗ ವಿಪರೀತ, ಕರೆಂಟ್‌ದೀಪ, ಅಶುದ್ಧ ಗಾಳಿ, ಮತ್ತೆ ಅಲ್ಲಿ ಇರೋವು ಯಾಗೋಳು "ಬಿಝೀ" ಪಾಪ! ಈ ದೆಯ್ಯ ಅಲ್ಲಿಗೆ ಹೋದರೆ ಮೂಸವೂ ಇಲ್ಲೆ. ಅದೆಲ್ಲಾ ಇರ್ಲಿ, ಈ ಅಜ್ಜಿದ್ ಕೋಳಿ ಕಥೆ ಕೇಳಿ...

ಆ ಚುಳ್ಳುಚುಳ್ಳು ಹೇಂಟೆ ಇಪ್ಪತ್ತೊಂದು ಮೊಟ್ಟೆ ಹಾಕಿತ್. ಇನ್ನ್ ಕಾಪು ಕೂರಿಕೆ 'ಡಕ್‌ಡಕ್'ಂತೇಳ್ಕಂಡ್ ಕಾಪುಗೆ ಹಾರಿ ಕೂರಿಕೆ ಹೋತು. ಆದರೆ ಅಜ್ಜಿಮಾತ್ರ ಸುತರಾಂ ಆ ಹೇಂಟೆನ ಕಾಪು ಕೂರಿಕೆ ಬುಡ್ಕಿಲೆ. ಯಾಕೆ ಗೊತ್ತುಟಾ ? ಅದ್ ಕಾಪು ಕುದ್ದರೆ ಮೊಟ್ಟೆಹಾಕ್ದು ತಡಾ ಆದೆಲ್ಲ, ಅದ್ಕೆ.

ಕಾಪು ಕೂರದಂಗೆ ಏನೆಲ್ಲಾ ಉಪಾಯ ಈ ಅಜ್ಜಿನಕ್ಕಲೆ ಊಟ್ಟು ನೋಡಿ. ಕೆಲವು ಅಯ್ಯೆಕ ಕೂಸಿಗೆ ಹಾಲ್ ಮರ್ಸಿಕೆ ಏನೇನೊ ಮಾಡಿವೆ. ಹುಳಿನೀರ್, ಬೇವಿನೆಣ್ಣೆ, ಹಾಗಲ ಸೊಪ್ಪು ರಸ, ಗಿಣಿಕೆ ಸೊಪ್ಪು ರಸನೆಲ್ಲ ಉಜ್ಜಿಕಂಡವೆ. ಕಡೆಗೂ ಈ ಕೂಸು ಹಾಲ್ ಕುಡಿಯುಕೆ ಪೇಚಾಡ್ರ ಈ ದನಗಳ ದೊಡ್ಡಿಗೆ ಹಾಕುವೆಲ್ಲ, ಹಂಗೆ ತಕಂಡೋಗಿ ತೌರ್‌ಮನೆಲಿ ಬುಟ್ಟ್‌ಬಟ್ಟವೆ. ಇಲ್ಲಿ ಕೇಳಿ ಈ ಅಜ್ಜಿ ಕೋಳಿನ ಹಿಡ್ಕಂಡ್ ಎರಡ್ಡು ರೆಕ್ಕೆಗಳ ಹಿಂದಕ್ಕೆ ಕಟ್ಟಿತ್. ಆ ಹೇಂಟೆ ಪಾಪ ಈ ವಿಮಾನ ನಿತ್ತಮೇಲೆ ಕಂಡೆದಲ್ಲಾ ಹಂಗೆ ಕಾಂಬಕೆ ಶುರಾತ್. ಆ ಬ್ಯಾನೆಲಿ ಅದ್ ಹೆಂಗಿತ್ತೊ? ಈ ಶಿಕ್ಷೆನೂ ಸಾಲ್ದತ ಮತ್ತೇನ್ ಮಾಡ್ತ್. ? ಹೇಂಟೆನ ತಕಂಡೋಗಿ ನೀರ್ಲಿ ಮುಳ್ಗಿಸಿತ್. ಆದ್ರೂ ಹೇಂಟೆ 'ಕೊರ್ರೇ ಕೊರ್ರೇ'ಂತೇಳ್ದು ಬುಟ್ಟತ್ಲೆ. ಮತ್ತೆ ಮನೆ ಹಿಂದೆ (ಉಂಬೊಳೆಗೆ ಹಕ್ಕಲೆ) ಕೆಸರ್ ನೀರ್ ಇದ್ದದೆಲ್ಲಾ [ಹಂದಿಗ ಬಿದ್ದ್‌ಕಂಡ್ ಇದ್ದವೆ ನೋಡಿ ಅಲ್ಲಿ] ಅಲ್ಲಿ ಹೇಂಟೆನ ಮುಚ್ಚಿತ್. ಪಾಪ, ಆ ಹೇಂಟೆ ಅಲ್ಲಿ ನಿತ್ತ್, ನಿತ್ತ್ ಕಾಲ್ ಬಚ್ಚಿಹೋದೆ. ಕೂರಿಕೆ ಬತ್ತದೆ. ನಿಲ್ಲಿಕೂ ಆಕಿಲೆ. ಆದ್ರೂ 'ಡಕ್‌ಡಕ್'ಂತೇ

ಳ್ಕಂಡೇ ಇದ್ದದೆ. ಮತ್ತೆ ಅಜ್ಜ ಏನ್ ಮಾಡ್ತ್? ಕೋಳಿನ ಹಿಡ್ಕಣ್ತ್, ಒಂದ್ ರೆಕ್ಕೆಂದ ಒಂದ್ ಗರಿನ ಕಿತ್ತತ್. ಅದೇ ಗರಿನ ಅದ್ರ ಮೂಗಿಗೆ ಅಡ್ಡಡ್ಡ ಚುಚ್ಚಿತ್. ನೀವು ನಾನಾ ನಮೂನೆ ಮೀಸೆ ನೋಡಿರ್ಪರಿ. ಕಡ್ಡಿ ಮೀಸೆ, ಕಂಬಳಿ ಹುಳ ಮೀಸೆ, ಚಾರ್ಲಿ ಚಾಪ್ಲಿನ್ ಮೀಸೆ, ಕೊಂಬ ಮೀಸೆ, ಫ್ರೆಂಚ್ ಕಟ್ಟ್ ಮೀಸೆ, ಪೊದೆ ಮೀಸೆ, ವೀರಪ್ಪನ್ ಮೀಸೆ.. ಈ ಅಜ್ಜ ಕೋಳಿಗೆ ಒಂದದ್ ಕಡ್ಡಿ ಮೀಸೆ. ಈಗ ಹೇಂಟೆ ಕಾವುಗೆ ಹಾರಿ ಕೂರಿಕೆ ಬತ್ತದೆ ನರ್ಕ ಬಂದದೆ. ಇದರ್ನ ನೋಡ್ಡ ಪಿಳ್ಳೆಕಳಿಗೆ ನಗೆಯೋ ನಗೆ. ಅಜ್ಜ ಕೋಳಿಗೆ ಮೀಸೆ ಬಂದುಟು ಢಂ ಢಂ ಢಂ. ಕಡ್ಡಿ ಮೀಸೆ ಹೇಂಟೆಗೆ ಬಂದುಟು ಢಂ ಢಂ ಢಂ. ಪಾಪ! ಕೋಳಿಗೆ ಪಿಳ್ಳೆಗಳ ಕಾಂಬಾಸೆ, ಅಜ್ಜಗೆ ಮೊಟ್ಟೆ ತಿಂಬಾಸೆ.

ಒಂದ್ ರಾತ್ರೆ ಹುಂಜ ಕೊರ್ರ್ರೇ ಕೊರ್ರ್ರೇಂತ ಕೂಗ್ತಾ ಇತ್ತ್. ಆ ಸಮ ರಾತ್ರಿಲಿ ಅಜ್ಜ ಒಬ್ಬಳೇ ಕೋಳಿಗೂಡಿಗೆ ಹೋದ. ಹುಂಜ ಗೂಡೊಳಗೆ ಬಿದ್ದ್‌ಕಂಡ್ ಒದ್ದಾಡ್ತೆ. ಹಾ ಶಿವ್ನೇ ಏನಾತ್. ಪೆರ್ಪಣಮನಿ ಬಾತಾಂತೇಳಿಕಂಡ್ ಚೂಕೂಡ್ತೆ. ನಾಯಿಗ ಅಲ್ಲಿ ಇಲ್ಲಿ ಬೊಗಳಿಕಂಡ್ ಓಡಾಡ್ತಾ ಇದ್ದೊ. ಸೊಲ್ಪ ಹೊತ್ತಾತ್ತಕನ ಹುಂಜ ಮಾಮೂಲಿ ಕೂರುವಂಗೆ ಕುದ್ದ್‌ಕಂಡದೆ. ಅಜ್ಜ ಕೂಡ್ಲೆ ಒಂದ್ ಲಾಕಿನ ಸಂಚಾರ ಗುಳಿಗಂಗೆ ಹರಿಕೆ ಹೇಳಿಕಂಡದೆ. ಅಲ್ಲಿ ಆದ್ ಏನಂತೇಳಿರೆ ಆ ಹುಂಜಕ್ಕೆ ಕನಸ್ಸ್! ಕುದುಕ ಹಿಡ್ಡಂಗೆ ಕನಸ್ ಬಿದ್ದಿದ್ದರ್, ಅಷ್ಟೆ! ನೀವೂಗೆ ನಗೆ ಬಾದು. ಹೋಗಿ ಹೋಗಿ ಕೋಳಿಗೆ ಕನ್ಸ್ ಬಿದ್ದದೆಯಾಂತ. ನಿದ್ದೆ ಮಾಡುವ ಪ್ರತಿ ಜೀವಿಗೂ ಕನಸ್ ಉಟ್ಟೇ ಉಟ್ಟ್. ಈ ವಿಚಾರ ಅಜ್ಜಗೆ ಗೊತ್ತಾಗದೆ ಸಂಚಾರ ಗುಳಿಗ ಚಾನ್ಸ್ ಹೊಡ್ತ್.

ಅಜ್ಜಗೆ ಬೇಜಾರಾತ್. ಯಾಕೆಂತೇಳಿರೆ ಕೋಳಿ ಇಷ್ಟೆಲ್ಲಾ ರಂಪ ಮಾಡ್ಕನ "ಜೀವಂತ ಇದ್ದ ಮನೆಯವು" ಯಾರೊಬ್ಬರೂ ಎದ್ದತ್‌ಲೆ. "ನೀವುಗೆ ಮಾಡಿ ಇಕ್ಕ್‌ಕನ ತಲೆಬೇಕು, ಕಾಲ್ ಬೇಕು, ಪಟ್ಟಕಾಯಿನೇ ಬೇಕು, ಕರಿಯಡನೇ ಬೇಕು, ಪುಕ್ಕ ಗೆಂಡೇನೆ ಬೇಕು. ನಿಮ್ಮ ದೊಂಡೆಗೇಂತ" ಬಯ್ಕಂಡ್ ಬಂದ ಅಜ್ಜ ಸುಮ್ಮನೆ ಮಲಗಿದೆ.

"ದುಡಿಯೊದು ಯಾರೋ, ತಿಂಬೊದು ಇನ್ಯಾರೋ"

○ ಬಿ. ಆರ್. ಜೋಯಪ್ಪ, ಮದೆ

# ನಮ್ಮ ಭಾಷೆ

ನಮ್ಮದ್ ಇದ್ ನಮ್ಮದ್
ಅರೆಕನ್ನಡ ಭಾಷೆ ನಮ್ಮದ್ ।

ಹೆತ್ತವ್ವ ಕಲ್ತದ್ ಅರೆಕನ್ನಡ ।
ಅಪ್ಪವ್ವ ಮಾತಾಡ್ದು ಅರೆಕನ್ನಡ ।
ನಾವುನೂ ಮಾತಾಡ್ದು ಅರೆಕನ್ನಡ । ನಮ್ಮ
ಮಕ್ಕಳಿಗೂ ಕಲ್ಸದೆ ಅರೆಕನ್ನಡ ॥

ಜಾತಿ ಭಾಷೆಗ ಉಟ್ಟ್ ಎಲ್ಲವುಕೆ ।
ಅವರವರ ಭಾಷೆನೆ ದೊಡ್ಡದವುಕೆ ।
ಯಾಕಾದುಲೆ ನೀವುಗೆ ಇದ್ ಮಾತಾಡಿಕೆ । ನಮ್ಮ
ಮನ್ಸೊಳಗೆ ಬರೋಕು ಇದ್ ಎಲ್ಲೊವುಕೆ ॥

ಎಲ್ಲಿ ಇದ್ದರು ನೀವು ಮರಿಬ್ಯಾಡಿದರ ।
ಬೇರೆವರ ನೋಡಿದ್ ತಿಳ್ಯಕು ಅದರ ।
ಗೌಡ ಭಾಷೆನೆ ಬೇರೆ ನಮ್ಮ ಜನಕೆ । ನಮ್ಮ
ಭಾಷೆನೆ ಸುಲಭ ಆದ್ ಮಾತಾಡಿಕೆ ॥

ಬೇರೆ ಭಾಷೆನು ಕೂಡ ನೀವ್ ಕಲಿಯೊಕು
ಬೇರೆ ಕಡೆ ಹೋಕನದ್ ಮಾತಾಡೊಕು ॥
ಕಲಿದು ಬೇಡಂತೇಳ್ದುಲೆ ಬೇರೆ ಭಾಷೆ । ನಮ್ಮ
ನಮ್ಮಲೆ ಇರೊಕು ಇದ್ ನಮ್ಮ ಭಾಷೆ ॥

ನಮ್ಮ ದೇಶಲಿ ಉಟ್ಟ್ ಎಸ್ಟೋ ಭಾಷೆ
ಅವುಕವುಕೆ ಸರಿಯಾಗಿ ಜಾತಿಮತಕೆ
ಕನ್ನಡಲೆ ಮಾತಾಡ್ದು ನೀ ಎಂತಕೆ । ನಮ್ಮ
ಭಾಷೆನ ಬೊತ್ಯಾಕೆ ನೀವ್ ಕಲಿಯಕೆ ॥

ಮಾತೃ ಭಾಷೆಗೆ ನೀವು ಮೋಸ ಮಾಡಿ
ಯಾರ್‍ಯಾರ ಭಾಷೆಗಳ ಪೋಷಣೆ ಮಾಡಿ ।
ಏನ್ ಸಾರ್ಥಕ ನೀವು ಹಿಂಗೆ ಮಾಡಿ । ನಮ್ಮ
ತಾಯಿ ಭಾಷೆನೆ ನೀವು ದೂರ ಮಾಡಿ ।

ಮುಮ್ಮಿ ಡ್ಯಾಡಿ ಹೆಸ್‌ರ್ ನಮ್ಮದಲ್ಲ
ಅಪ್ಪ ಅಮ್ಮ ಪದವೆ ನಾವ್ಗೆ ಬೆಲ್ಲ
ಇಂಗ್ಲೀಷ್‌ನ ಹೆಸ್‌ರ್ ಬೇಡ ನಾವ್ಗೆ । ನಮ್ಮ
ಕನ್ನಡದ ತಿಳಿಭಾಷೆ ಸಾಕ್ ನಾವ್ಗೆ ॥

ನಮ್ಮ ಭಾಷೆನ ನಾವು ಕೊಂಡಾಡೊಕು ।
ಅರೆಕನ್ನಡನ ನಾವು ಮುದ್ದಾಡೊಕು ।
ಗೊತ್ತಿಲ್ಲದವು ನೀವು ಇದ್ ಕಲಿಯೊಕು । ನಮ್ಮ
ಭಾಷೆನ ಬೆಳಕಿಗೆ ನಾವೇ ತರೋಕು ॥

○ ಹೊದ್ದೆಟ ಭವಾನಿಶಂಕರ್

# ಸೇಡಿಗೆ ಸೇಡ್

ಏನ್ರ ತಮ್ಮಣ್ಣ ನಿನ್ನ ಹಂದಿ ನನ್ನ ತೋಟನ ಹೂಡಿ ಹೂಡಿ ಯಾಲಕ್ಕಿ ಗಿಡ ಎಲ್ಲ ಬೀಳ್ಸಿ ಹಾಕುಟ್ಟು. ಎಷ್ಟ್ ಸಲ ಹೇಳ್ಪ್ದು ನಿಂಗೆ. ಇನ್ನೊಂದು ಸಲ ಆ ತರ ಮಾಡ್ರೆ ನಾ ಗುಂಡು ಹೊಡ್ದೆನೆ ತೇಳಿ ಭೋಜಣ್ಣ ಮನೆ ಕಡೆ ಬಂದ್ ಹೇಳ್ತ್. ನನ್ನ ಹಂದಿ ಹುಕ್ಕುದುಲೆಲ್ಲಾ. ನನ್ನ ಹಂದಿ ಫಾರೆಸ್ಟ್ ಕಡೆ ಹೋದರೆ ವಾರಕ್ಕೆ ಒಂದೇ ಸಲ ಬಾದು ತೇಳಿ ತಮ್ಮಣ್ಣ ಭೋಜಣ್ಣಂಗೆ ಹೇಳ್ತ್. ಅಷ್ಟ್ ಹೊತ್ತಿಗೆ ತಮ್ಮಣ್ಣನ ಹೆಣ್ಣ್ ಹೇಳ್ತ್,ಹೌದು ಭಾವ ಅದ್ ಅತ್ತ ಹೋದರೆ ವಾರಕ್ಕೆ ಒಂದೇ ಸಲ ಬಾದುತಾ. ಆಗಲಿ ಬುಡಿ ಗೊತ್ತಾದ ಯಾರ್ದ್ ಹುಕ್ಕುದು ತೇಳಿಕಂಡ್ ಭೋಜಣ್ಣ ಮನೆಕಡೆ ಹೋತ್. ಸುಮಾರ್ 15ದಿನ ಕಳ್ದ ಮೇಲೆ ಭೋಜಣ್ಣ ತೋಟ ಕಡೆ ಹೋದರೆ ಎಲ್ಲ ಹಾಳ್ ಮಾಡಿಟ್ಟು. ಇದರ ಹಿಂಗೆ ಬುಟ್ಟರೆ ಆಲೆ ತೇಳಿ ಭೋಜಣ್ಣ ರಾತ್ರಿ ಕಾದ್ ಕುದ್ದ್ತ್.ಆ ದಿನ ಹಂದಿ ಬೆಳಿಗ್ಗೆ 4ಗಂಟೆಗೆ ಸರಿಯಾಗಿ ಬಾತ್. ಕೋವಿ ತೆಗ್ದ್ ಮಡ್ಗಿತ್ ಹಂದಿ ಬೀತ್. ಆಗಲೆ ಅದನ್ನ ತಂದ್ ಆಕಡೆ ಬಿಲ್ಲವರ ಸಂಕಪ್ಪ ಪೂಜಾರಿ ಎಲ್ಲವರ ಕರ್ದ್ ಯಾರಿಗೂ ಹೇಳ್ಬಡಿ, ಕೇಳ್ರೆ ಕಾಡ್ ಹಂದಿ ತೇಳಿ ತ ಹೇಳಿಬುಟ್ಟು, ಆಗಲೆ ತಂದ್ ಹಜಿರ್ ಮಾಡ್ದೊ ಎಲ್ಲವ್ಕೆ ಪುಕ್‌ಸಟ್ಟೆ ಮಾಂಸ ಕೊಟ್ಟತ್. ಈ ವಿಷಯ ತಮ್ಮಣ್ಣಂಗೆ ಗೊತ್ತಾಗಿ ತಮ್ಮಣ್ಣನೂ ಬಾತ್. ಏನ್ರ ಹಂದಿ ಹೊಡ್ದೊಳಗಡ.ಹೌದ್ರ,ಕಾಡ್ ಹಂದಿ ಬೆಳಿಗ್ಗೆ 4 ಗಂಟೆಗೆ ಹೊಡ್ಡೆ ತೇಳ್ತ್. ನೀನ್ ಸಹ 2 ಕೇಜಿ ತಕರ ಎಲ್ಲವ್ಕೂ ಕೊಟ್ಟೊಳೆ. ತಮ್ಮಣ್ಣ ಸಿಕ್ಕಿದೇ ದೊಡ್ಡದ್ ತೇಳಿ ತಂದ್, ಒಂದ್ ಕುಪ್ಪಿ ಕಳ್ಳ್ ತಂದ್ ರಾತ್ರಿ ಎಲ್ಲ ಕುಡ್ದ್ ಮಜಾ ಮಾಡ್ತ್. ತಮ್ಮಣ್ಣನ ಹೆಣ್ಣ್ ಹೇಳ್ತ್, ಇದ್ ಊರು ಹಂದಿ ತರನೇ ರುಚಿ ಮುಟ್ಟದಲ್ಲಾಂತ ಮಜ ಪಾಪುನತ್ರ ಹೇಳ್ತ್. ಆಗ ಪಾಪು ಹೌದಮ್ಮ ತೇಳ್ತ್.ಏನೋ ಅವು ಕೊಟ್ಟೊ ಪೊಪ್ಪ ತಾತ್ ಪುಕ್‌ಸಟ್ಟೆ ತಾನೆ ?

ಆದರೆ ಭೋಜಣ್ಣನ ಮನೆವ್ಕೆ ಎಲ್ಲ ವಿಷಯ ಗೊತ್ತುಟ್ಟು ಇವನ ಹಂದಿನೇತೇಳಿ. ಯಾರಿಗೂ ಉಸುರು ಬುಟ್ಟತ್ಲೆ. ಸುಮಾರ್ 15 ದಿನ ಆತ್, ತಮ್ಮಣ್ಣನ ಹಂದಿ ಮನೆ ಕಡೆ ಬಾತ್ಲೆ. ಎಲ್ಲವ್ಕೆ ಬೇಜಾರ್ ಆತ್.ಎಲ್ಲ ಕಡೆ ಕೇಳ್ಯಾಡ್ದೊ. ಯಾರು ಕಂಡತ್ಲೆ ತೇಳ್ದೋ ಭೊ ಜಣ್ಣಂಗೂ ಹೇಳ್ತ್. ಅದ್ಕೆ ಅಂವ ಹೇಳ್ತ್. ನಿನ್ನ ಹಂದಿ ಫಾರೆಸ್ಟ್‌ಗೆ ಹೋಗಿರ್‌ದುರ. ಇಲ್ಲೆ ಈಗ 15 ದಿನಂದ ಅದ್ ಬಾತೇಇಲ್ಲೆರ.ಹೌದು ಈಗ ಯಾಲಕ್ಕಿ ಗಿಡ ಯಾವುದು ಹಾಳಾದ್ ಕೂಡಾ ಕಾಂಬಲೆರ. ತಮ್ಮಣ್ಣಂಗೆ ಡೌಟು ಬೀತ್. ಸಿಟ್ಟ್ ಬಂದ್, ಅಂದರೆ ನೀನೆ ಅಂದ್ ಹೊಡ್ದ್‌ದ್ ತೇಳ್ತ್. ಅಮ್ಮ ಅದ್ ನಂಗೆ ಗೊತ್ಲೆ. ಯಾವುದೋ ತೋಟಲಿ ಇತ್ತ್ ಹೊಡ್ದೆ. ಜನ ಕರ್‌ಕಂಡ್ ಹಜಿರ್ ಮಾಡ್ಟೆ. ಅದ್ ರಾತ್ರಿ ಆದರ್‌ಂದ ಯಾರಿಗೂ ಗೊತ್ತಾತ್ಲೆ. ಎಲ್ಲವು ಕಾಡ್‌ಹಂದಿ ತೇಳ್ದೊ. ನಿನ್ನ ಹಂದಿ ತಾ ನಂಗೆ ಗೊತ್ತ್‌ಲೆ ತೇಳ್ತ್ ಬೋಜಣ್ಣ.

ತಮ್ಮಣ್ಣನ ಹೆಣ್ಣ್ ಕೂಡ ಬಂದ್ ಕಣ್ಣೀರ್ ಹಾಕಿತ್. ಭಾವ ಈ ತರ ಮಾಡ್ದು ಬೇಡಾತ್ತ್‌ಗಿ. ನಾವು ಮೊದುವೆಗ ಹಂದಿ ಸಾಲ ಕೊಡೊಕು ಅದ್ಕೆ ಅದನ್ನ ಬುಟ್ಟದ್ದೊ ತೇಳಿ ಒಳ್ಳ ಮರ್‌ಟೆತ್.ಇಬ್ಬರು ಅಕ್ಕ ತಂಗೆಕ ಜಗಳಾಡಿಕೊಂಡೊ. ಅದ್ ಅಲ್ಲಿಗೇ ಬುಟ್ಟೊ, ಸುಮಾರ್ 20 ದಿನ ಕಳ್ದ್ ಮೇಲೆ ತಮ್ಮಣ್ಣ ಒಂದು ಉಪಾಯ ಮಾಡ್ತ್. ಈ ಭೋಜಣ್ಣನ ಹೂಂಜ ಕೋಳಿ ಯಾಗಲೋ ತಮ್ಮಣ್ಣನ ಕೋಳಿಗೆ ಕಚ್ಚಾಟ ಆಡ್ತಾ ಇದ್ದದೆ. ಇದನ್ನ ನೋಡಿ ತಮ್ಮಣ್ಣ ಮಜ ಪಾಪುಗೆ ಹೇಳ್ತ್. ಪಾಪು ಹೆಂಗಾದರ್ ಮಾಡಿ ಅದರ ಹೊಡಿಯೋಕುನೆ. ಆತ್ ಪೊಪ್ಪತೇಳಿ ಹೈದ ಅದೇ ಸಮಯಲಿ ಅಡ್ಡ ಬಡಿಗೆ ಬೀಸಿ ಮಡ್‌ಗಿತ್. ಕೋಳಿ ಹುಂಜನ ಕಾಲ್ ಮುರ್‌ದ್ ಬೀತ್. ಸುಮಾರ್ 4 ಕೆಜಿ ಆದು. ತಂದ್ ಹಜಿರ್ ಮಾಡಿ ಸಾರ್ ಮಾಡ್ದೋ. ಮಧ್ಯಾಹ್ನ ಭೋಜಣ್ಣ ಅಂಗಡಿ ಕಡೆಂದ ಬಾತ್. ಪಾಪು ರಬ್ಬರ್ ಬಿಲ್ ಕಟ್ಟತಾ ಜಗಲಿ ಮೇಲೆ ಕುದ್ದಿತ್.ಬೋಜಣ್ಣ ಬಾದು ನೋಡಿ ತಮ್ಮಣ್ಣನ ಹೆಣ್ಣ್ ಜೋರಾಗಿ ಅಗ್ರಣಿ ಹಾಕಿತ್. ಏನ್ರ ಪಾಪು ಗಮಗಮ ತೇಳ್ದೆ. ಮಾಂಸ ಏನಾದ್ರೂ ಮಾಡೊಳರ. ಹೌದು ಭೋಜಪ್ಪ, ಪೊಪ್ಪ ಗುಮ್ಮ ಹೊಡ್ದಳೊ. ಹ್ಣ ಅಂವ ಹೊಡ್ದದೆ? ಅವನ ಹತ್ರ ಕೋವಿ ಎಲ್ಲಿಟ್ಟು ? ಆಗ ತಮ್ಮಣ್ಣ ಒಳಗೆಂದ ಬಾತ್. ಹೌದ್ರ, 2 ಗುಮ್ಮಗ ತೋಟಲಿ ಕಚ್ಚಾಡ್‌ತ್ತಿದ್ದೊ, ಬಡಿಗೆ ಬೀಸಿ ಹೊಡ್ದೆ ಬೀತ್. ಆಗ ಭೋಜಣ್ಣ ಹೆಂಗಾರಾಗಲಿರ ಪಾಪು,ಒಂದ್ ಕುಪ್ಪಿ ಕಳ್ಳ್ ತಕಬಾರ ತೇಳಿ ಭೋಜಣ್ಣ ದುಡ್ಡ್ ಕೊಡ್ತ್.ತಂದೊ ಕುಡ್ದೊ. ಭೋಜಣ್ಣ ನಿಲ್ಲಿಕೆ ಆಗದಂಗೆ ಕುಡ್ತ್. ಮನೆಗೆ ಹೋಕನ ಒಂದು ಕ್ಯಾರಿಯರ್ ತುಂಬಾ ಮಾಸನ ಹೆಣ್ಣಿಗೂ ಕಳಸಿದೋ. ಅವುಳು ತಿಂದ್ ನೋಡಿ ಇದ್ ನಾಡ್ ಕೋಳಿ ಮಾಂಸ ತರ ಉಟ್ಟನೇ ತೇಳಿ ಮಕ್ಕಳಿಗೆ ಹೇಳ್ತ್.ಆದರೆ ಭೋಜಣ್ಣ ಮಾತ್ರ ಸುಮ್ಮನೆ ಇರ್‌ನೆ,ತಮ್ಮಣ್ಣ ಗುಮ್ಮ ಹೊಡ್ತ್‌ಗಡ. ಅದರ ಮಾಸ ತಿನ್ನಿ ಸುಮ್ಮನೆ ತೇಳ್ತ್.ಆಗ ಭೋಜಣ್ಣನ ಹೆಣ್ಣ್‌ಗೆ ತಕ್ಷಣ ಯೋಚನೆ ಆತ್. ನಮ್ಮ ಹೂಂಜ ಕೋಳಿ ಕೂರಿಕೆ ಇಂದ್ ಬಾತ್‌ಲೆತೇಳ್ತ್. ರಾತ್ರಿ ಎಲ್ಲ ಹುಡಿಕಿದೋ. ಸಿಕ್ಕಿತ್ಲೆ ಇವರ ರೋಗ ಫುಲ್ ಕುಡ್ದ್ ಬಂದೊಳೊ. ಈಗ ಎಂಥಾ ಹೇಳ್ರೂ ಗೊತ್ತಾದ್ಲೆ. ನಾಳೆ ನಿಮ್ಮ ದೆವ್ವ ಬುಡ್ಸಿನೆತೇಳಿ ಹೆಣ್ಣ್ ಪರ್‌ಚಿತ್. ಬೆಳಿಗ್ಗೆ ಕೋಳಿ ಎಲ್ಲಿ ನೋಡಿರು ಇಲ್ಲೆ. ಸೀದ ಎಲ್ಲವು ತಮ್ಮಣ್ಣನ ಮನೆಗೆ ಹೋದೊ, ಕೇಳ್ದೊ. ಆಗ ತಮ್ಮಣ್ಣ ನಂಗೆ

ಗೊತ್ಲೆತೇಳ್ತ್. ಆವೇಲೆ ಗೊತ್ತಾತ್. ಭೋಜಣ್ಣನ ಹೆಣ್ಣ್ ಹೇಳ್ತ್, ನಾವು ಆ ಕೋಳಿನ ದೆವ್ವಕ್ಕ ಬುಟ್ಟೆದ್ದೊ, ಈಗ ನೀವೆ ದೆವ್ವಗ ತೇಳಿ ಮರ್‌ಟತ್. ಆಗ ತಮ್ಮಣ್ಣ ನನ್ನ ಹಂದಿನ ನಾನ್ ಕೂಡ ಅಂದ್ ದೇವುರಿಗೆ ಬುಟ್ಟೆದ್ದೆ, ಆಗ ನೀವೆ ದೆವ್ವಗ ತೇಳ್ತ್. ಮತ್ತೆ ಅದರ ಮೊದುವೆಗೆ ಬುಟ್ಟೆದ್ದೆತೇಳ್ದ. ಹೇಳ್ಟ್ ಹೌದು, ನೀನ್ ಆ ತರ ಮಾಡ್ದಕ್ಕೆ ಹೇಳ್ಟೆತೇಳಿಕಂಡ್ ಜಗಳ ಆಡಿಕಂಡ್, ಹೀಂಗೆ ಸೇಡಿಗೆ ಸೇಡ್ ತೀರ್ಸಿ ಕಂಡೊ.

○ ಬಲ್ಯಾಟನ ಪದ್ಮಯ್ಯ
ಬೆಂಗಳೂರು

## ನ ಗೆ ಹ ನಿ

ವಿಜಯು ಮತ್ತೆ ಅಮೇರಿಕ ಇಬ್ಬೊರು ಸ್ನೇಹಿತರ್. ಅವು ಓದುದರ್ಲಿ ತುಂಬಾ ದಡ್ಡರ್.

ಅದ್ಕೆ ಮಾಸ್ಟ್ರ ಹೇಳ್ತ್, ನಾಳೆ ಇನ್ಸ್‌ಪೆಕ್ಟರ್ ಬಂದ, ನೀವಿಬ್ಬರು ಶಾಲೆಗೆ ಬರ್ಬಡಿತ.

ಮಾರನೇ ದಿನ ವಿಜಯು ಹೇಳ್ತ್. ನಾನ್ ಶಾಲೆಗೆ ಹೋನೆ, ನೀನ್ ಮನೆಲಿ ಅಣ್‌ಂಗಿ ಕತ. ಆಗ ಮನೆಗೆ ಬಂದ್ ಹುಡ್‌ಕಿರೆ ನಾನ್ ಏನ್ ಮಾಡ್ವ. ಆಗ ವಿಜಯು ಹೇಳ್, ನೀನ್ 'ಬಾತ್‌ರೂಂ'ಲಿ ಅಣ್‌ಂಗಿ ಕತ. ಶಾಲೆಲಿ ವಿಜಯುನ ಇನ್ಸ್‌ಪೆಕ್ಟರ್ ಕೇಳ್ತ್, ಭೂಪಟಲಿ ಅಮೇರಿಕ ಎಲ್ಲಿತ ? ಆಗ ವಿಜಯು ಹೇಳ್ತ್, ಅಮೇರಿಕ ಬಾತ್ ರೂಂಲಿ ಅಣ್‌ಂಗಿಟುತ !

ಉಳುವಾರನ ಪ್ರಸನ್ನ ಪೊನ್ನಪ್ಪ
ಐಕೊಳ

**ಎದುರಾಗುವ ತೊಡಕುಗಳನ್ನು ಎದುರಿಸಲು ಧೈರ್ಯ ಮತ್ತು ದೈವಸಂಕಲ್ಪದಿಂದ ಮಾತ್ರ ಸಾಧ್ಯ**

ಪಟ್ಟಡ ಪ್ರಭಾಕರ

## ಐಕ್ಯತೆಗೊಂದು ಪ್ರೇರಣೆ

ಭಾದಕರಿದ್ದರು ಸಾಧಕರ ಕೈಯೇ ಮೇಲು ಎಂಬುದಕ್ಕೆ ಮಡಿಕೇರಿ ತಾಲೋಕಿನ ಮರಗೋಡು ಸಮೀಪದ ಐಕೋಳ ಯುವಕ ಮತ್ತು ಮಹಿಳಾ ಸಂಘವು ಶ್ರಮಿಸಿ ಸಾಧಿಸಿದ ಸಾಧನೆಯು ಪ್ರಶಂಸನೀಯವಾದುದು. ಹುಡುಗ ಪಚ್ಚಾರಂಡ ಆಶೋಕ ನಾದರೆ ಹುಡುಗಿ ಪಾರೆಮನೆ ಶೈಲಾ. ಇವರ ಸ್ನೇಹವು ಪ್ರೀತಿಯಾಗಿ ಪ್ರೇಮಾಂಕುರವಾಗಿ ಮದುವೆಹಂತಕ್ಕೆ ಬಂದಾಗ ಪಾಲಕರಿಂದ ಅಡ್ಡಿ ಆತಂಕಗಳು. ಅದರ ಸಾಧಕತೆಯನ್ನು ಧೈರ್ಯವಾಗಿ ಮುಂದೆ ನಿಂತು ನಡೆಸಿಕೊಟ್ಟಿದ್ದಾರೆ ಐಕೊಳ ಗ್ರಾಮದ ಐಯ್ಯಪ್ಪ ಯುವಕ ಸಂಘವರು.

ದಿನಾಂಕ 23-4-98ರಂದು ಮಬಕೇರಿಯ ಸಿ.ಜೆ ಎಂ. ಕೋರ್ಟು ನ್ಯಾಯಾಧೀಶರ ಸಮ್ಮುಖದಲ್ಲಿ ರಿಜಿಸ್ಟರ್ಡ್ ಮದುವೆಯು ಸಹ ನಡೆದೆ ಹೋಯಿತು. ಅನಂತರ ಮಡಿಕೇರಿ ಓಂಕಾರೇಶ್ವರ ದೇವಸ್ಥಾನದಲ್ಲಿ ವಧು-ವರರು ಹಿರಿಯರ ಹಾಗೂ ಗ್ರಾಮಸ್ಥರ ಸಮ್ಮುಖದಲ್ಲಿ "ಸೀತಾ ಸ್ವಯಂವರ"ದಂತೆ ಯಾವುದೇ ಆಡಂಬರವಿಲ್ಲದೆ ಹೂವಿನ ಹಾರ ಬದಲಾಯಿಸಿ ಅರ್ಚಕರ ಮಂಗಳ ಘೋಷದೊಂದಿಗೆ ಅಕ್ಷತೆಕಾಳು ಹಾಕಿಸಿ ಕೊಂಡು ದಂಪತಿಗಳಾದರು.

ಜಾತಿಯತೆಯ ಸೊಗಡನ್ನು ತೊಡೆದು ಹಾಕುವ ಪ್ರಯತ್ನದ ಮುಂದಾಳುತನವನ್ನು ವಹಿಸಿದ್ದು ಬೇರೆ ಯಾರು ಅಲ್ಲಾ, ನಮ್ಮ ಜನಾಂಗದ ಯುವ ಮುಂದಾಳು ಶ್ರೀ ಕೊಂಪುಳೀರ ಬಿ. ಗಣೇಶರವರು. ಈ ಕಾರ್ಯವನ್ನು ಕೊಡಗು ಸಂಗಾತಿ ಕಣ್ಣಾರೆ ಕಂಡು ಮೆಚ್ಚಿಗೆಯಿಂದ ತಿಳಿಸಲು ಹರ್ಷಿಸುತ್ತದೆ.

○ ಅಮ್ಮಾಜೀರ ಪೊನ್ನಪ್ಪ
ಕಾವೇರಿನಾಡು, ಬೆಂಗಳೂರು

### ಪ್ರಿಯ ಓದುಗರೇ ಮತ್ತು ಹಿತೈಷಿಗಳೇ

ಕೊಡಗುಸಂಗಾತಿ ಪತ್ರಿಕೆಯಲ್ಲಿ ಬರುವ ಸುದ್ಧಿ, ವಿಚಾರ, ಕಥೆ, ಕವನ ಇತ್ಯಾದಿಗಳಿಗೆ ನಾವು ಹಣ ಕೇಳುತ್ತಿಲ್ಲ. ಪರಿಚಯ, ವ್ಯಕ್ತಿ ಪರಿಚಯ, ಸಂದರ್ಶನಗಳಿಗೆ ಸಹಕಾರ ಸ್ವೀಕರಿಸುತ್ತೇವೆ.

ಜಾಹೀರಾತು/ಶುಭಾಶಯಗಳಿಗೆ ಕಾಲು ಪುಟಕ್ಕೆ250-/ ಅರ್ಧಪುಟಕ್ಕೆ 500/-, ಒಂದು ಪುಟಕ್ಕೆ 1000/-, ಕೊನೆ ಪುಟಕ್ಕೆ ರೂ 1500/- ಚಾರ್ಜ್ ಮಾಡಲಾಗುವುದು.

ಯಾರು ಕೆಟ್ಟ ವಿಚಾರಗಳಿಗೆ ಕಿವಿಗೊಡದೆ ಈ ಹಿಂದೆ ಸಹಕರಿಸಿದ ರೀತಿಯಲ್ಲಿಯೇ ಮುಂದುವರಿದು ಜನಾಂಗದ ಪತ್ರಿಕೆಯಾಗಿ ಬೆಳೆಸುವ ನಿಟ್ಟಿನಲ್ಲಿ ತಮ್ಮ ಅಮೂಲ್ಯವಾದ ಸಹಕಾರವನ್ನು ಬಯಸುತ್ತೇವೆ.

**ಸಂಪಾದಕಿ ಮತ್ತು ಪತ್ರಿಕಾ ವೃಂದ**

## ಹಿರಿಯರ ಪುಣ್ಯ ಸ್ಮರಣೆಯಲ್ಲಿ



### ದಿ|| ಪಟ್ಟಡ ಕಾರ್ಯಪ್ಪ ಮುತ್ತಣ್ಣ ಮತ್ತು ನೀಲವ್ವ ಮುತ್ತಣ್ಣ ದಂಪತಿಗಳು

| | |
|---|---|
| ಜನನ : 12-5-1905 | ಜನನ : 20-5-1919 |
| ಮರಣ : 29-5-1986 | ಮರಣ : 6-5-1974 |

ಪ್ರಪಂಚದಲ್ಲಿ ಹುಟ್ಟುವೆಂಬುದು ಅನಿಶ್ಚಿತ. ಆದರೆ ಸಾವು ಮಾತ್ರ ಪ್ರತಿಯೊಬ್ಬರಿಗೂ ನಿಶ್ಚಿತ ಬದುಕಿನ ದಿನಗಳಲ್ಲಿ ಸಾಧನೆ ಛಲಗಳೊಂದಿಗೆ ಸಾರ್ಥಕತೆಯನ್ನು ಕಾಣುವವರು ಕೆಲವೇ ಮಂದಿ. ಸಮಾಜ ಸಂಘಟನೆಯ ಚಿಂತಕರಾಗಿ ಜೀವನಪರ್ಯಂತ ದುಡಿದು ಇಡೀ ಊರಿನ ಜನತೆಯನ್ನುತನ್ನ ಸಂಸಾರವೆಂಬ ಭಾವನೆ ಇಟ್ಟುಕೊಂಡು ಅವರ ಸೇವೆಯೇ ಈಶ ಸೇವೆಯೆಂದು ನಂಬಿ ಅರ್ಧ ಶತಮಾನಗಳಷ್ಟು ಕಾಲ ಊರಿಗಾಗಿ ದುಡಿದು ರಸ್ತೆ, ಸಂಘ-ಸಂಸ್ಥೆ, ಶಾಲೆಗಳನ್ನು ರಚಿಸಿ, ಗರಡಿಯ ಬೆಳವಣಿಗೆ ಮಾಡಿ ನೆಮ್ಮದಿಯನ್ನು ಕಂಡಿದ್ದ ದಿ|| ಮುತ್ತಣ್ಣನವರು ಮಡಿಕೇರಿ ತಾಲ್ಲೂಕು ಅವಂದೂರು ಗ್ರಾಮದಲ್ಲಿ ತನ್ನತಂದೆ ತಾಯಿಯವರ 4ನೇ ಸುಪುತ್ರರಾಗಿ 1905ನೇ ಇಸವಿ ಮೇ ತಿಂಗಳ 12ರಂದು ಜನ್ಮವೆತ್ತಿ, ಪ್ರಾಥಮಿಕ ವಿದ್ಯಾಭ್ಯಾಸವನ್ನು ಕಾರುಗುಂದ ಶಾಲೆಯಲ್ಲಿ ಮುಗಿಸಿ ಮುಂದೆ ಆದರ್ಶ ರೈತರಾಗಿ ಬದುಕಿ, ಊರಿನ ಸಂಘ ಸಂಸ್ಥೆಗಳಲ್ಲಿ ದುಡಿದು ಏಳ್ಗೆಯತ್ತ ಚಿಂತನೆ ಮಾಡುವುದರೊಂದಿಗೆ ತನ್ನ ಸಕಲ ಅನುಭವಗಳನ್ನು ರೈತಾಪಿ ಜೀವನದಲ್ಲಿ ಕಳೆದು ಓರ್ವ ಹಿರಿಯ ಧೀರ ಆದರ್ಶ ವ್ಯಕ್ತಿಯೆಂದು ಹೆಸರುಗಳಿಸಿದ್ದರು.

ತನ್ನಊರಿನ ಶ್ರೀ ಕೃಷ್ಣಸ್ವಾಮಿ ದೇವರನ್ನುನೆನಸದ ನಿಮಿಷವಿಲ್ಲ. ಹಾಗೆ ಕುಲದೇವ ಏಳುಮಲೆ ಎಪ್ಪತ್ತುಗಿರಿ ವಾಸ ಶ್ರೀ ವೆಂಕಟರಮಣ ಸ್ವಾಮಿಯನ್ನು ವಿಶೇಷ ಪೂಜೆಯೊಂದಿಗೆ ವೈಶಿಷ್ಟಕ್ರಮದಲ್ಲಿ ಪೂಜಿಸದ ದಿನಗಳಿಲ್ಲ. ದಿನ ಚರಿಯಲ್ಲಿ ಆರಂಭಗೊಳ್ಳುತ್ತಿದ್ದುದೇ ಅಚಲ ದೈವಭಕ್ತಿಯ ಪೂಜೆ ವಂದನೆಗಳೊಂದಿಗೆ. ದಿವಂಗತರು ತನ್ನ ಜನ್ಮ ಜಾತಕವನ್ನು ಬಲವಾಗಿ ನಂಬಿಕೊಂಡಿದ್ದರು. 12-5-86ರಂದು ಅಂದರೆ 82ನೇ ಜನ್ಮ ದಿನಕ್ಕೆ ಕಾಲಿಡುವಂದೆ ತನ್ನ ಮರಣಕೂಡ ಎಂದು ಹಲವಾರು ವರ್ಷಗಳ ಹಿಂದಿನಿಂದಲೆ ಹೇಳಿಕೊಳ್ಳುತ್ತಿದ್ದವರಿಗೆ, ತನ್ನಕುಲಗುರು ವೆಂಕಟ ರಮಣಸ್ವಾಮಿಯ ಮೇಲಿದ್ದ ಅಪಾರ ಭಕ್ತಿಯ ರಕ್ಷೆಯು ಮುಂದೆ 17 ದಿನಗಳಷ್ಟು ಕಾಲ ಹೆಚ್ಚಿಗೆ ನಮ್ಮೊಂದಿಗೆ ಬದುಕುವಷ್ಟು ಪುಣ್ಯವನ್ನು ಕಲ್ಪಿಸಿ ಕೊಟ್ಟಿತು. ತಾ|| 29-5-86ರ ದಿನ ನಮ್ಮೆಲ್ಲರ ಪಾಲಿಗೆ ಕರಾಳ ದಿನ. ಆದರೆ ಅವರ ಪಾಲಿಗೆ ಸುದಿನ. ನಮ್ಮೆಲ್ಲರನ್ನು ಅಗಲಿ ಪರಮಾತ್ಮನಲ್ಲಿ ಲೀನರಾಗಿಕುಟುಂಬದ ಗುರುಕಾರೋಣರಾಗಿ ಇಂದಿಗೆ 12 ವರ್ಷಗಳು ಸಂದವು. ತನ್ನ ಅಂತಿಮ ಕ್ಷಣದ ಮಾತು ಹೀಗಿದೆ, "ಜನಾಂಗದ ಏಳಿಗೆಗಾಗಿ ಯೇ ನನ್ನ ಪ್ರಾಣ ವನ್ನು ಅರ್ಪಿಸುತ್ತಿದ್ದೇನೆ ಮಕ್ಕಳೆ" ಎನ್ನುವ ಅವರ ಕಟ್ಟಕಡೆಯ ಮಾತಿನಂತೆ ಮತ್ತು ಅವರ ದೈವ ಪ್ರೇರಣೆಯೇ ಈ ಪತ್ರಿಕೆ ಕೊಡಗು ಸಂಗಾತಿಯ ಉದಯವಾಗಲು ಕಾರಣವಾಯಿತು.

ಅವರ ದಿವ್ಯ ಆತ್ಮಕ್ಕೆ ಅದೇ ನಮ್ಮ ಕುಲಗುರುಸ್ವಾಮಿಯು ಶಾಂತಿಯನ್ನು ನೀಡಲಿ ಮತ್ತು ಜೀವನದ ಅವರ ಕೆಲವು ಆದರ್ಶ ಗುಣಗಳು ಅವರ ಸರ್ವ ಬಂಧು ಬಳಗದವರಿಗೂ ಮತ್ತು ಅವರ ಕುಟುಂಬದ ಎಲ್ಲಾ ಸದಸ್ಯರಿಗೂ ದಾರಿದೀಪವಾಗಲಿ ಎಂದು ತುಂಬು ಹೃದಯದಿಂದ ಬೇಡುವ


ಬೈತಡ್ಕ ಬೆಳ್ಯಪ್ಪ ಜಾನಕಿ, ಮಡಿಕೇರಿ

K·R.N.N. 240

ನೋಂದಣಿ : 509/96-97 | ದೂರವಾಣಿ : 642822

## ಕಾವೇರಿನಾಡು ವಿದ್ಯಾಸಂಸ್ಥೆ [ರಿ.]

[ಕರ್ನಾಟಕ ಸರ್ಕಾರದಿಂದ ಅಂಗೀಕೃತವಾಗಿದೆ]



# ಕಾವೇರಿನಾಡು ವಸತಿ ಆಂಗ್ಲಶಾಲೆ

[ಕಾಡುಕರೇನ ಹಳ್ಳಿ, ಮಹದೇವಪುರ, ನೆಲಮಂಗಲ ತಾ|| ಬೆಂಗಳೂರು ಗ್ರಾ. ಜಿ. -562123]

## ಅರೆಭಾಷಿಕ ಜನಾಂಗದವರಿಗೆ ಸಂತೋಷದ ಸುದ್ಧಿ :-

ನಮ್ಮ ವಿದ್ಯಾಸಂಸ್ಥೆಯು 1996ರಲ್ಲಿ ನೋಂದಣಿ ಕಛೇರಿಯಿಂದ ನೋಂದಾಯಿಸಲ್ಪಟ್ಟಿದ್ದು, ಶಿಕ್ಷಣ ಕ್ಷೇತ್ರದಲ್ಲಿ ವಿವಿಧ ಉದ್ಧೇಶಗಳನ್ನು ಹಾಗೂ ಗುರಿಯನ್ನು ಹಮ್ಮಿಕೊಂಡಿದೆ. 1997-98ರ ಸಾಲಿನಲ್ಲಿ ಮೊದಲ ವರ್ಷದ ಹೆಜ್ಜೆಯನ್ನು ಮುಂದುವರಿಸಿ 98-99ರ ಎರಡನೆಯ ವರ್ಷಕ್ಕೆ ಮುನ್ನುಗ್ಗುತ್ತಿರುವ ವಿಷಯವನ್ನು ನಿಮಗೆ ತಿಳಿಸಲು ಹರ್ಷಿಸುತ್ತೇವೆ. 97-98ರ ಸಾಲಿನಲ್ಲಿ ಎಲ್.ಕೆ.ಜಿ., ಯು ಕೆ.ಜಿ. ಹಾಗೂ ಒಂದನೆಯ ತರಗತಿಯಿಂದ ಪ್ರಾರಂಭಿಸಿ, ಪ್ರಸಕ್ತ 98-99ರ ಸಾಲಿನಲ್ಲಿ ಎರಡನೆಯ, ಮೂರನೆಯ, ನಾಲ್ಕನೆಯ, ಐದನೆಯ ತರಗತಿಗಳನ್ನು ತೆರೆಯುತ್ತಿದ್ದೇವೆ. ಮೇ ತಿಂಗಳ 4ನೇ ದಿನಾಂಕದಿಂದ ಶಾಲಾ ತರಗತಿಗಳ ಪ್ರವೇಶವನ್ನು ಪ್ರಾರಂಭಿಸಿದ್ದೇವೆ.

1-6-98 ರಲ್ಲಿ ಶಾಲೆಯನ್ನುಸಂಸ್ಥೆವತಿಯಿಂದ ಆರಂಭಿಸುತ್ತಿದ್ದೇವೆ. ವಸತಿ ಶಾಲೆಯನ್ನು ತೆರೆದಿದ್ದು, ಈಜುಗಾರಿಕೆ, ಕರಾಟೆ, ಭರತನಾಟ್ಯ, ಯೋಗಾಸನ, ಟೈಲರಿಂಗ್, ಟೈಪಿಂಗ್ ತರಗತಿಗಳನ್ನು ಆರಂಭಿಸುತ್ತಿದ್ದೇವೆ. ನಮ್ಮ ಶಾಲೆಯಲ್ಲಿ ಒಳ್ಳೆಯ ತರಬೇತಿ ಹೊಂದಿರುವ ಶಿಕ್ಷಕಿಯರುಗಳು, ವಿಶಾಲವಾದ ಕೊಠಡಿಗಳು, ಸುಸಜ್ಜಿತ ಪಿಠೋಪಕರಣಗಳು, ವಿಶಾಲವಾದ ಆಟದ ಮೈದಾನವನ್ನು ಒಳಗೊಂಡ ವಸತಿ ಆಂಗ್ಲ ಶಾಲೆಯಾಗಿರುತ್ತದೆ. ಜನಾಂಗದ ಸರ್ವರು ಇದರ ಸದುಪಯೋಗ ಪಡೆದುಕೊಳ್ಳಬೇಕಾಗಿ ಪ್ರಾರ್ಥನೆ.

**ಹೆಚ್ಚಿನ ವಿವರಗಳಿಗೆ : ಮುಖ್ಯ ಶಿಕ್ಷಕಿಯನ್ನು/ಸಂಸ್ಥೆಯ**
**ಕಾರ್ಯದರ್ಶಿಯನ್ನಾಗಲಿ ಭೇಟಿಯಾಗಲು ಈ ಮೂಲಕ ಕೋರಿದೆ**

ಅಧ್ಯಕ್ಷೆ : ಕಡ್ಯದ ಸುಶೀಲ ಗೋಪಾಲ
ಖಜಾಂಚಿ : ಶ್ರೀಮತಿ ನೀಲಾವತಿ ಪೊನ್ನಪ್ಪ

ಎ. ಎಸ್. ಪೊನ್ನಪ್ಪ
ಗೌ|| ಕಾರ್ಯದರ್ಶಿ

Printed by M K Thammaiah and Published by Kodagu Sangathi on behalf of Pattada P. Sheelamani and Printed at ASHIRWAD PRINTERS, 180/A, 6th Main, Vinayakanagar, Mysore-21 Published at Mysore, Editor PATTADA P. SHEELAMANI, No. 35 1st Cross, 4th Block (Near Divisional Telephone Office) Jayalakshmipuram, Mysore-570012 Phone ; 516771